ಯಕ್ಷಗಾನ

ಚೂಡಾಮಣಿ ಪ್ರಸಂಗ



ಪ್ರಕಾಶಕರು

ಯಂ. ವಿ. ರಾವ್

ಮಂಗಳೂರು

ಶ್ರೀಮದ್ರಾಮಾಯಣದೊಳಗಣ

ಯಕ್ಷಗಾನ

ಚೂಡಾಮಣಿ ಪ್ರಸಂಗ

(ಕುಂಬಳೆ ಪಾರ್ತಿ ಸುಬ್ಬ ವಿರಚಿತ)

ಪ್ರಕಾಶಕರು:

ಯಂ. ವೆಂಕಟ ರಾವ್

76

ಬೆಲೆ: 0-80 ಪೈಸೆಗಳು

ಯಕ್ಷಗಾನ ಚೂಡಾಮಣಿ ಪ್ರಸಂಗ

(ಕುಂಬಳೆ ಪಾರ್ತಿ ಸುಬ್ಬ ವಿರಚಿತ)

ಐದನೆಯ ಜನಪ್ರಿಯ ಮುದ್ರಣ

1976

●

ಪ್ರಕಾಶಕರು:

ಯಂ. ವೆಂಕಟ ರಾವ್,

ಶ್ರೀ ನಿತ್ಯಾನಂದ ಗ್ರಂಥಾಲಯ

ಹಂಪನಕಟ್ಟೆ, ಮಂಗಳೂರು-575001.


—: ಪಾತ್ರಗಳ ವಿವರ :—

ಶ್ರೀರಾಮ
ಲಕ್ಷ್ಮಣ
ತಾರೆ
ಸುಗ್ರೀವ
ಹನುಮಂತ
ಈಶ್ವರ
ಪಾರ್ವತಿ
ಸ್ವಯಂಪ್ರಭೆ
ಜಾಂಬವ
ಮೃಕಂಡು-ಕಣ್ವರು
ಅಂಗದ

ಸಂಪಾತಿ
ತೃಣಬಿಂದು ಮುನಿ
ಲಂಕಿಣಿ
ರಾವಣ
ಸೀತಾದೇವಿ
ಸರಮೆ-ತ್ರಿಜಟೆಯರು
ಮಂಡೋದರಿ
ಜಂಬೂಮಾಲಿ
ಅಕ್ಷಕುಮಾರ
ಇಂದ್ರಜಿತು
ಪ್ರಹಸ್ತ

ವಾನರರು, ಅನುಕೂಲನಾರಿಯರು, ವನಪಾಲಕರು, ಮುಂತಾದವರು.

ಶ್ರೀಃ



॥ ಶ್ರೀ ಸೀತಾರಾಮಚಂದ್ರಾಯ ನಮಃ ॥

ಶ್ರೀಮದ್ರಾಮಾಯಣದೊಳಗಣ
ಯಕ್ಷಗಾನ ಉಂಗುರ ಸಂಧಿ
ಚೂಡಾಮಣಿ ಪ್ರಸಂಗ
(ಸುಂದರಕಾಂಡ ಅಥವಾ ಲಂಕಾದಹನ)

ಶಾರ್ದೂಲವಿಕ್ರೀಡಿತಂ

ಓತಪ್ರೋತಸಮಸ್ತ ವಸ್ತುನಿಚಯಂ ಓಂಕಾರಬೀಜಾಕ್ಷರಂ
ಓಂಕಾರಪ್ರಕೃತೀಷಡಕ್ಷರಹಿತಂ ಓಂಕಾರಕುಂದಾಂಕುರಮ್
ಓಂಕಾರಸ್ಫುಟಭೂರ್ಭುವಃಸ್ವಪರಿಧಿಂ ಓಘತ್ರಯಾರಾಧಿತಂ
ಓಂಕಾರೋಜ್ವಲಸಿಂಹಪೀಠನಿಲಯಂ ರಾಮಂ ಭಜೇ ತಾರಕಮ್ ॥

ವಾರ್ಧಿಕ

ಕುಶನೆ ಕೇಳ್ ವಾಲಿಯಂ ಸಂಹರಿಸಿ ಕಿಷ್ಕಿಂಧ । ದೆಸೆಯಾಧಿಪತ್ಯಮಂ ಸುಗ್ರೀವನಿಂಗಿತ್ತು । ಕುಶಲದಿಂ ಪ್ರಸ್ರವಣಪರ್ವತಕೆ ನಡೆತಂದು ಮಳೆಗಾಲಮಂ ಕಳೆದರು ॥ ವಸುಧೆಪಾಲಕನೊಂದು ದಿನ ತನ್ನ ಮನದಿ ಚಿಂ । ತಿಸುತ ಜನಕಾತ್ಮಜೆಯ ನೆನೆನೆನೆದು ದುಃಖಿಸುತ। ಪಸರಿಸುವ ಸ್ಥೈರಣೆಯೊಳಂತರಂಗವ ನಿಲಿಸಿ ಸೌಮಿತ್ರಿಗಿಂತೆಂದನು ॥ ೧ ॥

ರಾಗ ಮಧ್ಯಮಾವತಿ ಏಕತಾಳ

ಪೋಗೋ ಸೌಮಿತ್ರಿ ಸುಗ್ರೀವ ಬರಲಿಲ್ಲ । ಬೇಗದಿಂದಲಿ ಕರೆಕೊಂಡು ಬಾರಯ್ಯ ॥ ನಾಗಸನ್ನಿಭವೇಣಿಯ ರತಿಸುಖ । ಭೋಗದಿಂದೆಮ್ಮ ಮರೆತನೊ ರವಿಜಾತ ॥ ೧ ॥ ತನ್ನ ಕಾರ್ಯಗಳಾಗುವ ಪರ್ಯಂತ । ಚೆನ್ನ ನೀನೆ

ಯೆಂದು ನಂಬಿಸಿ ಮತ್ತೆ ॥ ಕನ್ನೆ ರಾಜ್ಯವು ತನಗೆ ಸಿಕ್ಕಿತುಯೆಂದು । ಇನ್ನೆಮ್ಮ ಹಂಗೇನೆಂದು ಮರೆತನೋ ರವಿಜಾತ ॥ ೨ ॥

ರಾಗ ಘಂಟಾರವ ರೂಪಕತಾಳ

ಅಗ್ರಜ ವೀರ । ಅಣ್ಣ ವಾಲಿಯು । ನಿಗ್ರಹಿಸಿದೆ । ನೀರಜಾಂಬಕ ॥ ಸುಗ್ರೀವಂಗೆ ನಾ ಸಾಲದಾಪೆನೆ । ಉಗ್ರ ಮೂರುತಿ । ಕಳುಹಿಸೆನ್ನನು ॥ ೧ ॥

ರಾಗ ಮಧ್ಯಮಾವತಿ ಏಕತಾಳ

ಕಾರ್ಯಸಂಗ್ರಹವಾಗಬೇಕವನಿಂದ । ಶೌರ್ಯಬೇಡವೊ ಶಾಂತಚಿತ್ತದಿ ಪೋಗಿ ॥ ಸೂರ್ಯನಂದನನೊಡನೆ ಸೂಚನೆ ಗೆಯ್ದು । ಧೈರ್ಯವನದಿ ಕರಕೊಂಡು ಬಾ ಬೇಗ ॥ ೧ ॥

ಶಾರ್ದೂಲ ವಿಕ್ರೀಡಿತಂ

ಇಂತೆಂದಗ್ರಜ ನೇಮವಂ ಕೊಡಲದಂ ಕೈಗೊಂಡು ತದ್ವಾಕ್ಯಮಂ
ಶಾಂತಾಕಾರನ ದಿವ್ಯಪಾದಯುಗಕಂ ತಾ ವಂದಿಸುತಾಕ್ಷಣಂ ।
ಮಂತ್ರಾಸ್ತ್ರಂ ಘನಚಾಪಗೊಂಡು ಬರಲುಂ ಕಂಡಾಗಲತ್ಯಂಜುತಂ
ಕಾಂತಾರತ್ನಮೆನಿಪ್ಪ ತಾರೆ ಪೊಗಳುತ್ತಿಂತೆಂದಳಾ ವೀರಗಂ ॥ ೧ ॥

ಕಂದ

[ಬಡನಡು ಬಳುಕುತ ಬಾಲೆಯು । ಕಡು ಕೋಪದೊಳಯ್ತರುತಿಹ ಲಕ್ಷ್ಮಣನೆಡೆಗಂ ॥ ತಡಮಾಡದಯ್ದಿ ತರಳೆಯು । ನುಡಿದಳು ಸರಸೋಕ್ತಿಗಳಿಂದಲಿ ಮೃದುನುಡಿಯಿಂ ॥ ೧ ॥]

ರಾಗ ಮಧುಮಾಧವಿ ಏಕತಾಳ

ದಶರಥಸುತ ವೀರ ಧರಣಿಪಾಲ ಗಭೀರ । ಕುಸುಮಸಾಯಕರೂಪ ಕೀರ್ತಿಕಲಾಪ ॥ ಪ ॥ ಧರೆಯನಾಳುವ ಮಹಾ ದೊರೆಗಳು ನೀವು । ಮರ ಮರ ಚರಿಪ ವಾನರರಯ್ಯ ನಾವು ॥ ಸರಿಯೆ ನಿಮ್ಮವರಿಂಗೆ ಶಾಂತನಾಗಯ್ಯಾ । ತರಣಿನಂದನನೊಡನೆ ಕೋಪವೇಕಯ್ಯ ॥ ೧ ॥ ಹಿಮಕರಮುಖಿ ಕೇಳಿ ತಾರೆ ಸುನೀತೆ । ಕಮಲಲೋಚನೆ ಪುಣ್ಯನಾಮವಿಖ್ಯಾತೆ ॥ ಅಮರಾದಿಗಳು ಮೆಚ್ಚ ರಾಡಿ ತಪ್ಪಿದರೆ । ಕಮಲನೇತ್ರನ ಕೂಡೆ ಕಪಟಮಾಡುವರೆ ॥ ೨ ॥ ಮಳೆಗಾಲದನು ದಾಟೆ ಬರುವೆನೆಂದೆನುತ ಇಳೆಯಪಾಲಕಗೆಂದು ಬಂದನನೀತ ॥ ಅಳಿವ ಕಾಯವಿದಿಂತು ಆಡಿ ತಪ್ಪಿದರೆ । ಉಳಿವುದೆ ಕುಲಕೀರ್ತಿ ನೀ ಕೇಳು ತಾರೆ ॥ ೩ ॥ ಪರದೇಶದೊಳಗುಳ್ಳ ಕಪಿಗಳನೆಲ್ಲ । ಕರೆಸಿಕೊಂಬುವಕಿಷ್ಟು ತಡ

ಪಾಯಿತಲ್ಲ ॥ ಇರಬೇಕು ದಯವೆಂದು ಇನಜನ ಕರೆತಂದು | ಚರಣಕೊಪ್ಪಿಸಿದಳು ಚಪಲಾಕ್ಷಿಯಂದು ॥ ೪ ॥

ವಾರ್ಧಿಕ

ಗುಣದಿಂದೊಡಂಬಡಿಸಿ ಕೋಪವಂ ತಣಿಸಿ ಲ|ಕ್ಷ್ಮಣಗೆ ಕಾಣಿಸಲೆಂದು ಸುಗ್ರೀವ ತನ್ನ ಕಪಿ | ಗಣ ಸಹಿತ ಶೀಘ್ರದಿಂ ಕಿಷ್ಕಿಂಧೆಯನು ಪೊರಟು ನಡೆತಂದರಾ ಕ್ಷಣದೊಳು ॥ ಹನುಮ ಜಾಂಬವ ಸುಷೇಣಾಂಗದರು ನಳ ನೀಲ | ರಣಪರಾಕ್ರಮಿ ಗವಯ ದ್ವಿವಿದ ಮೊದಲಾದ ಸಂ | ದಣಿ ಸಹಿತ ಬಂದು ರಾಮನ ಚರಣಕೆರಗೆ ಲಕ್ಷ್ಮಣನಣ್ಣಗಿಂತೆಂದನು ॥ ೧ ॥

ರಾಗ ಪಂತುವರಾಳಿ ಮಟ್ಟೆ ತಾಳ

ಅಗ್ರಜ ಮಹಾನುಭಾವ | ಲಾಲಿಸೆನ್ನ ಬಿನ್ನಪವ | ಸುಗ್ರೀವನಲ್ಲಿಗೆ ನಿನ್ನೆ | ಪೋಗುವಂಥ ವೇಳೆಯಲ್ಲಿ ॥ ೧ ॥ ಅಗ್ರಗಣ್ಯರೆಲ್ಲ ಕೂಡಿ | ಕೊಂಡು ತನ್ಮೊಳು ಮಾತಾಡಿ | ಶೀಘ್ರದಿಂದ ಬರಬೇಕೆಂದು | ಪಯಣಸನ್ನದ್ಧನಾಗಿರ್ದ ॥ ೨ ॥ ತಪ್ಪುವಾತನಲ್ಲ ಮಾತ | ತಮ್ಮವರೆಲ್ಲರ ಕರೆಸಿ | ಒಪ್ಪವಿಟ್ಟುಕೊಂಬುದಕ್ಕೆ | ಇಷ್ಟು ತಡವಾಯಿತಂತೆ ॥ ೩ ॥

ಕಂದ

ಅನುಜನ ವಾಕ್ಯವನಾಲಿಸಿ | ವನಜಾಂಬಕ ಚಿತ್ತದಿ ಬಹು ಸಂತೋಷಿಸುತಂ ॥ ಜನಕನ ಮಗಳಂ ಪುಡುಕಲಿ | ಕನುವೆಂತುಟೊ ನೋಡಿರೆಂದ ಸುಗ್ರೀವನೊಳುಂ ॥ ೧ ॥

ರಾಗ ಸೌರಾಷ್ಟ್ರ ಅಷ್ಟತಾಳ

ಭೂಮಿಪಾಲ ಶಿಖಾಮಣಿ ರಾಮಚಂದ್ರ | ದೇವ | ಕಮಲಲೋಚನ ಸಾಧುಗುಣಸಾಂದ್ರ ॥ ೧ ॥ ನಿಮಿಷದೊಳಗೆ ನಾಲ್ಕು ದೆಸೆಗಳಲಿದ್ದರು | ನಿಮ್ಮ | ಕೋಮಲಾಂಗಿಯನ್ನು ತಂದು ತೋರುವೆನು ॥ ೨ ॥ ಫುಲ್ಲನೇತ್ರ ಬ್ರಹ್ಮಲೋಕದಲ್ಲಿದ್ದರು | ನಿಮ್ಮ | ವಲ್ಲಭೆ ಕೈಲಾಸಗಿರಿಯಲ್ಲಿದ್ದರು ॥ ೩ ॥ ಬಲ್ಲಿದ ವೈಕುಂಠಲೋಕದಲ್ಲಿದ್ದರು | ಇವ | ರೆಲ್ಲರ ಕಳುಹಿಸಿ ಶುದ್ಧಿತರಿಸುವೆನು ॥ ೪ ॥

ರಾಗ ಸಾವೇರಿ ಏಕತಾಳ

ವಾನರರು ಕೇಳಿರಯ್ಯ ಎನ್ನ ಮಾತನು | ಈಗ | ಜಾನಕೀದೇವಿಯನರಸಿ ಕಾಣಬೇಕು ನೀವೆಲ್ಲರು ॥ ವಾನರರು ॥ ಪ ॥ ಉತ್ತರದೇಶಕೆ ಪೂರ್ವ | ಪಶ್ಚಿಮ ದಕ್ಷಿಣ ನಾಲ್ಕು | ದಿಕ್ಕಿನೊಳು ದಶಾಸ್ಯನಿಪ್ಪ | ವರ್ತಮಾನ ಪೇಳಿರಯ್ಯ ॥ ವಾನರರು ॥ ೧ ॥ ಅಷ್ಟ ದಿಕ್ಪಾಲಕರಿರ್ಪ | ಪಟ್ಟಣದೊಳಿದ್ದರೋವ |

ದೃಷ್ಟಿಯಿಂದ ಕಂಡು ಬಂದು ಸೃಷ್ಟೀಶಗೆ ಪೇಳಬೇಕು ॥ ವಾನರರು ॥ ೨ ॥ ತಿಂಗಳ ದಿನದಿ ರಾಮ | ನಂಗನೆಯಿದ್ದಾ ನಿಧಾನ | ವಿಂಗಡಿಸದಿದ್ದರೆಯು | ಭಂಗಿಸುವೆನು ನಿಮ್ಮನು ॥ ವಾನರರು ॥ ೩ ॥

ಕಂದ

ಇಂತಾ ಸಮಯದಿ ರಾಘವ | ನಂತರಂಗದಲಿ ಕರೆವುತ ಕಿವಿಮಾತಿನೊಳಂ ॥ ಚಿಂತೆಯೊಳುಂಗುರವನು ಹನು | ಮಂತನಿಗೀಯುತ್ತೆ ಸೀತೆಯ ಕುರುಹಂ ಪೇಳ್ದಂ ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ಭಾನುನಂದನನೆಂದ ಬಹಳ ಕಟ್ಟಾಜ್ಞೆಯ | ವಾನರೇಶ್ವರರು ಕೇಳಿ ॥ ದಾನವಾಂತಕನಂಘ್ರಿಗೆರಗಿ ತನ್ನೊಳಗಿದ್ದ | ಸೇನೆಯ ವಿಂಗಡಿಸಿ ॥ ೧ ॥ ಜಾನಕಿಯಮ್ಮನವರನು ಕದ್ದೊಯ್ದುದ | ಶಾನನನಾರೆನುತ ॥ ನಾ ಮುನ್ನ ತಾಮುನ್ನವೆನುತ ಪಶ್ಚಿಮಕೆ ಸು | ಷೇಣ ದಳವೆರಸಿ ಬಂದ ॥ ೨ ॥ ನಳ ನೀಲ ಗವಯ ಗವಾಕ್ಷ ಕೇಸರಿ ಶತ | ಬಲಿ ಮುಂತಾದವರೆಲ್ಲರು ॥ ಇಳೆಯ ನಂದನೆಯನ್ನು ಬಿಡದೆ ಮೂಡಣದಿಕ್ಕಿ | ನೊಳು ಹುಡುಕಾಡಿದರು ॥ ೩ ॥ ಇಳವರ್ತ ಬದರಿಕಾ ಕೇತುಮಾಲಾರಣ್ಯ | ಸ್ಥಳ ನವ ಖಂಡಗಳ ॥ ಇಳೆಯ ಪರ್ವತಗಳ ಸಂದು ಮೂಲೆಯನೆಲ್ಲ | ಸುಳಿದಾಡುತ್ತೈತಂದರು ॥ ೪ ॥ ವರುಣ ವಾಯುವ್ಯ ಕುಬೇರ ಈಶಾನ್ಯರ ಪುರವೊಂದುಳಿಯದಂತೆ ॥ ಧರಣಿನಂದನೆಯನ್ನು ಬೆಸಗೊಂಡು ಕೇದಾರ | ಗಿರಿಯ ಮೇಲಕೆ ಬಂದರು ॥ ೫ ॥ ದಿಕ್ಕು ದಿಕ್ಕಿನೊಳಿಪ್ಪ ಅರಸು ಬಲ್ಲಾಳರ ಸೊಕ್ಕುಗಳನೆ ಮುರಿದು ॥ ಒಕ್ಕಲೊಂದುಳಿಯದೆ ಮನೆಮನೆಯಲಿ ಕಳ್ಳ | ರಕ್ಕಸನನು ಕೇಳುತ ॥ ೬ ॥ ಮಕ್ಕಳು ಹಿರಿಯರು ಜವ್ವನದಾ ಹೆ | ಮ್ಮಕ್ಕಳ ಬೆಸಗೊಳ್ಳುತ | ಅಕ್ಕರಿಲ್ಲದೆ ಕಂಡುದಿಲ್ಲೆಂಬ ಆಣೆಯ | ತೆಕ್ಕೊಂಡರವರ ಕೈಯ ॥ ೭ ॥ ಪೂರ್ವ ಪಶ್ಚಿಮ ಉತ್ತರಾದಿ ದೇಶವನಾಳ್ವ ಉರ್ವಿ | ಪಾಲಕರ ಕೈಯ ॥ ಸರ್ವಥಾ ದಶಕಂಠನಿಲ್ಲೆಂಬ ಓಲೆಯ | ಗರ್ವದಿ ಬರೆಸಿಕೊಂಡು ॥ ೮ ॥ ನಿರ್ವಹಿಸಿದರು ಪಾತಾಳಲೋಕಂಗಳ | ಲೀರ್ವರ ಬೆಸಗೊಳ್ಳುತ ॥ ಉರ್ವಿಯ ರಚಿಸಿದಾತನ ಕಂಡು ಕೈಲಾಸ | ಪರ್ವತಕೈತಂದರು ॥ ೯ ॥ ಪಾರ್ವತಿ ರಮಣನ ದರುಶನಕವನಿಂದು | ಬರ್ಪನೆಂಬುದನು ಕೇಳಿ ॥ ಶರ್ವನ ಹಿಡಿದು ರಾವಣನ ತೋರೆನಲವ | ರೀರ್ವರು ನಸುನಕ್ಕರು ॥ ೧೦ ॥

ವಚನ

ಆಗಲಾ ಸದಾಶಿವನು ಈ ಬಲಿಮುಖರ ಪರಾಕ್ರಮಕ್ಕೆ ಮೆಚ್ಚಿ ಪಾರ್ವತಿಯೊಡನೆ ಏನೆಂದನು ಎಂದರೆ-

ರಾಗ ಸೌರಾಷ್ಟ್ರ ಅಷ್ಟತಾಳ

ಕಂಡೆಯಾ ಗಿರಿಜಾತೆ ಕಪಿಗಳ ಸಾಹಸ | ಕಂಡೆಯೇನೆ | ದೇವ | ಪುಂಡರೀಕಾಕ್ಷ ಶ್ರೀರಾಮನ ದಂಡನು | ಕಂಡೆಯೇನೆ ॥ ೧ ॥ ತಲೆ ಮೂಗು ಹಣೆ ಹುಬ್ಬುಗಳು ಗಂಟಿಕ್ಕಿರುವುದ | ಕಂಡೆಯೇನೆ | ತಾವು । ಬಲುತರ ಕೋಪಾಟೋಪದಿ ಹಲ್ಲು ಕಿರಿವುದ । ಕಂಡೆಯೇನೆ ॥ ೨ ॥ ದಶಕಂಠನನು ತೋರಿ ಸೆಂದೆಮ್ಮ ತಡೆದುದ । ಕಂಡೆಯೇನೆ | ಚೋರ | ಅಸುರ ರಾವಣನೆಲ್ಲಿ ತೋರೆಂಬ ಗರ್ವವ | ಕಂಡೆಯೇನೆ ॥ ೩ ॥

ವಚನ

ಇಂತೆಂದು ಪಾರ್ವತಿಯೊಡನೆ ಪೇಳಿ ಕಪಿನಾಯಕರೊಡನೆ ಏನೆಂದನು ಎಂದರೆ—

ರಾಗ ಸಾಂಗತ್ಯ ರೂಪಕತಾಳ

ಕಪಿನಾಯಕರು ಕೇಳಿ ನಾವೆಂಬ ಮಾತನು | ಕಪಟವಲ್ಲಿದು ವೇದ ವಚನ ॥ ಚಪಲನೇತ್ರೆಯನೊಯ್ದ ಚೋರ ರಾವಣನ ಕಂ | ಡವರಿಲ್ಲ ನಮ್ಮ ಪರ್ವತದಿ ॥ ನಿಪುಣರು ನೀವು ಸುಮ್ಮನೆ ಬಳಲುವುದೇಕೆ | ಗುಪಿತದಿ ಹನುಮಂತ ಮುಂದೆ ॥ ತಪನಕುಲೇಶನ ರಾಣಿ ಜಾನಕಿಯ ಕಂ | ಡಪನಿದು ಪುಸಿಯಲ್ಲ ಮಾತು ॥ ೨ ॥ ಭಾಳಲೋಚನನೆಂದ ನುಡಿಯನ್ನು ಕಪಿಗಳು ಕೇಳುತೆಲ್ಲರು ಕೈಯ ಮುಗಿದು ॥ ಬೀಳುಕೊಂಡಲ್ಲಿಂದ ನಡೆತಂದು ರವಿಜಗೆ | ಪೇಳಿದರೀ ವೃತ್ತಾಂತವನು ॥ ೩ ॥

ರಾಗ ಭೈರವಿ ಝಂಪೆ

ಪಾತಾಳದೊಳಗಿಲ್ಲ। ಸತ್ಯಲೋಕದೊಳಿಲ್ಲ | ಆತ ದಶಕಂಠ ಕೈ | ಲಾಸದೊಳಗಿಲ್ಲ | ॥ ೧ ॥ ನವಖಂಡ ಭೂತಳವ | ನಾವ್ ತಿರುಗಿ ನೋಡಿದೆವು | ಭುವನದೊಳಗಾರು ಕಂ | ಡವರಿಲ್ಲವಂತೆ ॥ ೨ ॥ ಭೂಲೋಕದರಸುಗಳು | ಬರೆದಿತ್ತ ಬಿನ್ನಪದ ಓಲೆಗಳ ಮುಂದಿರಿಸಿ | ಕೈಮುಗಿದರಾಗ ॥ ೩ ॥ ಓಲೆಗಳ ತೆಗೆದದನು | ವಾಚಿಸುತ ಸುಗ್ರೀವ | ಭಾಳ ಚಿಂತೆಯ ತಾಳಿ | ಭಯದೊಳಿರುತಿರ್ದ ॥ ೪ ॥

ವಾರ್ಧಿಕ

ಲವನೆ ಕೇಳಿಂತು ಸೀತೆಯನರಸಿಕೊಂಡು ಬಂದವರ ನುಡಿ ಕೇಳ್ದು ಚಿಂತಿಸುತಿರಲು ಇತ್ತ ಮೂ | ವರು ವಾಲಿಸುತ ಹನುಮ ಜಾಂಬವರು ಮೊದಲಾಗಿ ಉಳಿದ ಕಪಿಸೇನೆ ಸಹಿತ ॥ ತವಕದಲಿ ದಕ್ಷಿಣಕೆ ಮುಖವಾಗಿ ಬಹಳ

ದೇ । ಶವ ಕಳೆದು ಬೆಸಗೊಳುತ ನಡೆತಂದರಲ್ಲಲ್ಲಿ । ಭವನದೊಳಗತಿ ಪುಣ್ಯ ಕ್ಷೇತ್ರ ಬ್ರಹ್ಮಾಲಯಂಗಳ ಕಂಡು ನೆರೆ ನಮಿಸುತ ॥ ೧ ॥

ರಾಗ ತುಜಾವಂತ್ಯ ಅಷ್ಟತಾಳ

ಬಂದರು । ನಡೆ । ತಂದರು ॥ ಪ ॥ ರಾಮಚಂದ್ರನ ಕಾಂತೆಯ ಕುರುಹ ನೊಂದೊಂದನೆ ಬೆಸಗೊಳ್ಳುತ್ತ ॥ ಬಂದರು ॥ ಅ ॥ ಬಲು ಬಲು ಗಿರಿಗಳ ದಾಟಿ । ಬಳಲಿ ಬಂದರು ಈ ಪಾಟಿ । ಹಲವು ಪರ್ವತಂಗಳ । ಕಾನನವ ಹುಡುಕುತ್ತ ಬಂದರು ॥ ೧ ॥ ತೆಲುಗುಗಣ್ಯ ಪಾಂಡ್ಯರಾಜ್ಯವು । ಮಲೆಯಾಳರ ತುಳುವರ ಸೀಮೆ । ಗಳಲಿ ದಶಕಂಠನನು ಸೀತಾ । ಲಲನೆಯನ್ನು ಬೆಸಗೊಳ್ಳುತ್ತ ॥ ಬಂದರು ॥ ೨ ॥ ಈ ತೆರದಿ ಬ್ರಹ್ಮ ಕ್ಷತ್ರಿ । ನೀತಿವಂತ ವೈಶ್ಯ ಶೂದ್ರ । ನೂತನ ಪಾಂಚಾಲ ನಾನಾ । ಜಾತಿಯರ್ಮನೆಯರಿತುಕೊಂಡು ಅವರ । ಮಾತಿನಿಂದ ನುಡಿಸಿ ಸು ಪ್ರ । ಖ್ಯಾತರು ನಡೆತಂದರು ಭೂ । ಜಾತೆಯನ್ನು ಬೆಸಗೊಳ್ಳುತ್ತ ॥ ಬಂದರು ॥ ೩ ॥

ರಾಗ ಕಾಂಬೋಜ ಝಂಪೆತಾಳ

ಆ ಕಡೆಯ ತಿರುತಿರುಗಿ ಅಲ್ಲಿ ಕಂಡರು ಕಪಟ । ದಾಕೃತಿಯೊಳೆಸೆವ ಸರಸಿಯನು ॥ ತಾವ್ಯುಡಿವೆವೆಂದು ಜಲದಾಸೆಯಿಂ । ದಿಳಿಯೆ ಮಯ । ಲೋಕವದು ಕಣ್ಗೆ ರಂಜಿಸಿತು ॥ ೧ ॥ ಆರ ಪಟ್ಟಣಗಳಿವು ನೋಡಿದರೆ ಕಣ್ಗೆ ವಿ । ಸ್ತಾರವಾಗಿದೆ ಚೆಲ್ವ ನಗರ ॥ ಶ್ರೀರಾಮನರಸಿ ಜಾನಕಿಯ ಕದ್ದೊಯ್ದಂಥ । ಚೋರನನು ಹುಡುಕಬೇಕಿಲ್ಲಿ ॥ ೨ ॥ ಬಾಗಿಲನು ದಾಂಟಿ ಒಳ ಬಂದು ನೋಡಿದರೆ ಸೊಗ । ಸಾಗಿರುವ ರಾಜಬೀದಿಗಳ ॥ ನಾಗಸುರನರಲೋಕದಿಂದಲತಿಶಯವಿದನು । ಹೇಗೆ ನಿರ್ಮಿಸಿದ ಮಯ ರಾಮಾ ॥ ೩ ॥ ಉಪ್ಪರಿಗೆ ಕೋಣೆ ನಡುಮನೆ ಚೌಕಿ ಚಾವಡಿಯ । ಚಪ್ಪರದ ಮಾಳಿಗೆಯ ಬೆಳಕು ॥ ಇಪ್ಪತ್ತನಾಲ್ಕು ಕಂಭದ ನಡುವೆ ಮಂಟಪಗ । ಳೊಪ್ಪಿದುದು ನೋಡಲಾಶ್ಚರ್ಯ ॥ ೪ ॥ ಕಟ್ಟಾಣಿ ಮುತ್ತುಗಳ ಕೆತ್ತಿಸಿದ ಕಂಭಗಳ । ಮುಟ್ಟಿದರೆ ಹೊಯ್ವ ಬೊಂಬೆಗಳ ॥ ಕಟ್ಟಿರುವ ವಜ್ರ ವೈಢೂರ್ಯ ಗೋಮೇಧಿಕದ । ಕಟ್ಟೆಗಳ ಜಗಲಿಗೋಡೆಗಳ ॥ ೫ ॥ ಯಾರ ಮನೆಯೊಳಗೆ ನೋಡಿದರು ನವರತ್ನಗಳ । ತೋರಣದ ಮೇಲುಗಟ್ಟಗಳ ॥ ಊರೂರು ಮನೆಮನೆಯ ಕೇರಿಕೇರಿಯೊಳೆಲ್ಲ । ನಾರಿ ಜಾನಕಿಯ ಹುಡುಕಿದರು ॥ ೬ ॥ ಎಲ್ಲಿ ನೋಡಿದರು ಜಾನಕಿಯ ಕಂಡೇವೆಂಬ । ರಿಲ್ಲದಾಯಿತು ಗೃಹಾಂತರದಿ ॥ ಬಲ್ಲಿದ ಕಪೀಶ್ವರರು ಬಂದ ದಾರಿಯ ತಪ್ಪಿ । ಅಲ್ಲಲ್ಲಿ ಸುಳಿದಾಡುತಿಹರು ॥ ೭ ॥ ಮೋಸವಾಯಿತು

ಹೊಲಬುದಪ್ಪಿದೆವು ಮಯನಿರ್ಮಿ | ತಾ ಸರೋವರದೆಡೆಗೆ ಬಂದು ॥ ಈಸು ದಿನ ದಣಿದೆವೆಂದೆನುತ ಬಳಿಕಲ್ಲಿರುವ | ಆ ಸ್ವಯಂಪ್ರಭೆಯ ನುಡಿಸಿದರು ॥೮॥

ರಾಗ ಕೇದಾರಗೌಳ ಅಷ್ಟತಾಳ

ನಳಿನಾಯತಾಂಬಕಿ ನಿಲ್ಲೊಂದು ನಿಮಿಷವೆ | ಮೆಲ್ಲು ಮಾತನಾಡಬಲೆ॥ ಇಳೆಗೆ ಪೋಗುವ ದಾರಿ ಯಾವುದೆಂದರಿಯದೆ | ಹೊಲಬುದಪ್ಪಿದೆವಾವಲ್ಲೆ ॥ ॥ ೧ ॥ ಬಲು ದಿನವಾಯಿತು ಬಂದುದಿಲ್ಲಿಗೆ ನಾವೀ ಹೊಳಲು ಸಂಚರಿಸಿದೆವು ॥ ಹೊಲಬುದಪ್ಪಿದೆವೊಬ್ಬ ದೂತನ ಕೊಟ್ಟೆಮ್ಮ | ಇಳೆಯತ್ತ ಕಳುಹು ಬಾಲೆ ॥ ೨ ॥ ಜಾಂಬವಂತನ ನುಡಿ ಕೇಳ್ದು ಸ್ವಯಂಪ್ರಭೆ | ಸಂಭ್ರಮದಲಿ ನಗುತ ॥ ಡಂಭಕತನದಲಿ ಹಾಸ್ಯವ ಮಾಡಿದ | ಅಂಬುಜದಳನಯನೆ ॥ ೩ ॥ ತರುಣಿಯ ನುಡಿಗೆ ಕೋಪಿಸಿ ಹನುಮಂತ ಭೀ | ಕರರೂಪನಾಗೆ ಕಂಡು ॥ ಶರಣೆಂದು ಬೆದರಿ ಕಾಣಿಕೆಯಿತ್ತು ತಾ ಬಂದು | ಧರಣಿಯ ತೋರ್ದಳಂದು ॥೪॥

ವಾರ್ಧಿಕ

ಈ ರೀತಿಯಿಂದ ಸ್ವಯಂಪ್ರಭಾ ನಗರವಂ | ಮೀರಿ ಬಳಿಕಲ್ಲಿಂದ ನಡೆತಂದರಂದು ಕಾ | ವೇರಿಯಮ್ಮನ ತೀರ ಬಳಿವಿಡಿದು ಬಂದಾ ಮೃಕಂಡು ಮುನಿಗಭಿವಂದಿಸಿ ॥ ಸಾರಿದರು ತೆಂಕಮುಖವಾಗಿ ಬಳಿಕಲ್ಲಿರುವ | ವೀರ ಮುನಿ ಕಣ್ವಾಶ್ರಮಕೆ ನಡೆತರಲವರು | ಯಾರು ನೀವೆಲ್ಲಿಗೈದುವಿರೆಂದು ಕೇಳೆ ವನಚರರವರಿಗಿಂತೆಂದರು ॥ ೧ ॥

ರಾಗ ಮಾರವಿ ಝಂಪೆತಾಳ

ದಶರಥನ ಸುತನರಸಿ ಸೀತಾಂಗನಾಮಣಿಯ | ದಶಕಂಠನೆಂಬಸುರ ಕದ್ದೊಯ್ದನಂತೆ ॥ ಬಿಸಜಸಖಸುತನಾದ ಸುಗ್ರೀವ ನಮ್ಮೊಡನೆ | ಬೆಸಸಿ ಕಳುಹಿದನವಳ ಹುಡುಬೇಕಂತೆ ॥ ೧ ॥ ದೇಶದೇಶವ ತೊಳಲಿ ದಣಿದೆವಲ್ಲದೆ ನಮಗೆ | ಆ ಸೀತೆ ಕಣ್ಗೆ ಗೋಚರಿಸಲಿಲ್ಲಯ್ಯ ॥ ಮಾಸವೊಂದರವೊಳಗೆ ಪೋಗದಿದ್ದರೆ ಕಡೆಗೆ | ಗಾಸಿ ಮಾಡುವ ನಮ್ಮ ಭಾನುತನುಜಾತ ॥ ೨ ॥ ಎತ್ತ ಪೋಗುವದೆಂದು ಎಮಗೆ ತಿಳಿಯದೆ ನಿಮ್ಮ | ಹತ್ತಿರಕೆ ಬಂದೆವೈ ಕಡುತವಕದಿಂದ ॥ ಚಿತ್ತದಲಿ ತಿಳಿದು ದಯವಿತ್ತು ನಮ್ಮೆಲಿವಿ | ಗೊಂದುತ್ತರವ ಕೊಡಬೇಕು ಉತ್ತಮ ಮುನೀಂದ್ರ ॥ ೪ ॥ ಅವರ ನುಡಿಯನು ಕೇಳುತೀ ದಾರಿಯಲಿ ಪೋಗೆ ಶಿವನು ದಯಮಾಡುವನು ಶೀಘ್ರದಿಂದ ॥ ಅವನಿಜೆಯ ದರುಶನವು ಆಗುವುದು ನಿಮಗೆಂದು | ಬಹುಮಾನದಲಿ ಹರಸಿಯವರ ಕಳುಹಿದನು ॥ ೪ ॥

ರಾಗ ಕೇದಾರಗೌಳ ಅಷ್ಟತಾಳ

ಮುಂದೆ ನಡೆದು ಮಲಯಾಚಲದೆಡೆಗಾಗಿ | ಬಂದರು ಕಪಿವರರು ಒಂದೇ ಬುದ್ಧಿಯೊಳಿಲ್ಲ ಕುಳಿತು ಯೋಚಿಸಿದರು || ಮುಂದೇನು ಗತಿಯೆನುತ || ೧ || ಇಂದಿಗೆ ದಿನ ಮೂರುಳಿದುವು ಭಾಸ್ಕರ | ನಂದನನಪ್ಪಣೆಗೆ || ಮುಂಗಮನೆಯನು ಕಾಣದೆ ಪೋದರೆ ಕೊಂದಲ್ಲದೆ ಬಿಡೆನು || ೨ ||

ವಚನ

ಇಂತೆಂದು ಒಬ್ಬೊಬ್ಬರು ಪ್ರಸಂಗಿಸಲಾಗಿ ಆ ಮಾತಿಗೆ ಅಂಗದನ ಏನೆಂದನು ಎಂದರೆ—

ಹಿಂದೆ ನಮ್ಮಯ್ಯಗು ಭಾನುನಂದನನಿಗು | ಒಂದಲ್ಲ ಮನಸು ತಮ್ಮೊಳ ಅಂದಿನ ಹಗೆ ಬಿಡದೀಗ ಸೀತೆಯ ಕಂಡು | ದಿಲ್ಲೆಂದರೇನ ಮಾಡುವನೊ || ೧ || ಅಲ್ಲಿ ಆತನ ಕೈಲಿ ಕೊಲಿಸಿಕೊಂಬುದಕಿಂತ | ಇಲ್ಲಿಯೆ ಉಪವಾ ದೊಳನೆ || ಇಲ್ಲ ಈ ಪ್ರಾಣವೆಂದೆನಿಪುದೆ ಲೇಸೆಂದು | ಎಲ್ಲರ ಮುಂದೆ ಪೇ ದನು || ೨ || ಅಂಗದನಿಂತೆಂದ ಮಾತ ಕೇಳುತ ಕಪಿ | ಪುಂಗವ ಪರಮೇಷ್ಠಿ ಸುತನು || ಮಂಗಳ ಮಹಿಮ ಶ್ರೀರಾಮಚಂದ್ರನು ನಮ್ಮ | ಭಂಗಿಸುವ ಕೊಪ್ಪಗೊಡನು || ೩ || ಕೊಂದರೆ ಕೊಲಲಿ ಕಾಯ್ದರೆ ಕಾಯಲಾ ರಾಮ ಚಂದ್ರನ ಪಾದದ ಬಳಿಯೆ || ಹಿಂದೆ ಜಟಾಯು ಪ್ರಾಣವ ಬಿಟ್ಟು ಸುರಪನ ಮಂದಿರವನು ಸೇರ್ದುದರಿಯಾ || ೪ || ಈ ತೆರದಲಿ ತಮ್ಮೊಳಾಲೋಚನೆಯ ಗೆಯ್ದು | ಮಾತಾಡುತಿರುವ ವೇಳೆಯಲಿ | ಆತ ಜಟಾಯುವಿನಣ್ಣನೆಂದೆನಿಸಂ | ಪಾತಿ ಬಂದಿವರ ಕೇಳಿದನು || ೫ ||

ರಾಗ ತೋಡಿ ಅಷ್ಟತಾಳ

ಯಾರಯ್ಯ ! ನೀವು | ಯಾರಯ್ಯ || ಪ || ಯಾರಯ್ಯ ನೀವು ಎ ರೊಟ್ಟಾಗಿ ! ಘೋರ ಕಾನನದಲ್ಲಿ ಸುಮ್ಮನೆ ಕುಳಿತಿರ್ಪ । ದ್ಯಾರಯ್ಯ || ಅ ದಶರಥಸುತ ರಾಮನೆಂಬಾತನಾರು | ಪುಸಿಯಲ್ಲ ಭಾನುನಂದನನೆಂಬವರೆಲ್ಲಿ ದಶಕಂಠ ಜನಕನಂದನೆ ಸುದ್ದಿಯೇನು | ವಶವಿಲ್ಲದಿಂತು ಚಿಂತಿಸುವುದೇಕಿನ್ನು ಯಾರಯ್ಯ || ೧ || ತಮ್ಮನು ತನಗೆ ಜಟಾಯುವೆಂಬಾತ | ನಿರ್ಮಲದ ಸತ್ತನೆಂದೆಂಬ ಮಾತ || ನಿಮ್ಮೊಳಿಂದವರಾರು ಅದ ಕೇಳ್ದುದೆಲ್ಲಿ | ಒಮ್ಮೆ ನ್ನೊಡನೆ ವಿಸ್ತರಿಸಬೇಕಿಲ್ಲ || ಯಾರಯ್ಯ || ೨ ||

ರಾಗ ಮಧ್ಯಮಾವತಿ ಏಕತಾಳ

ವಸುಧೆಗುತ್ತಮವಾದಯೋಧ್ಯಾಪಟ್ಟಣದಿ | ದಶರಥನೃಪನೆಂಬ ಧರಣಿ
ತಿಲಕಗೆ ॥ ಕುಸುಮಗಂಧಿಯರು ಮೂವರು ಹೆಂಡಿರೊಳಗೆ | ಅಸಮ ಸಾಹ
ಸರು ನಾಲ್ವರು ಮಕ್ಕಳವಗೆ ॥ ೧ ॥ ಪಿತನ ಭಾಷೆಯ ಸಲಿಸೆ ಶ್ರೀರಾಮಚಂದ್ರ |
ತಿಸಹಿತಲಿ ಪಂಚವಟಿಯೊಳಿರೆ ಮುನ್ನ ॥ ಕಪಟದಿ ದಶಕಂಠ ಕದ್ದೊಯ್ದ
ತಿಯ | ಚಪಲಲೋಚನೆ ಕೂಗುತಿರಲು ದುಸ್ಥಿತಿಯ ॥ ೨ ॥ ಮಡದಿಯ
ಸಿ ಕೇಳಿ ಮತ್ತಾ ಜಟಾಯು | ತಡೆದು ಮಾರ್ಗದಿ ಪೋಗಗೊಡದೆ ಶುಭ
ಯ ॥ ಹೊಡೆದಾಡಿವರು ಬಲುಹೊತ್ತು ಪರ್ಯಂತ | ಕಡೆಗೆ ಮೋಸ
ಳವನ ಕೊಂದ ದಶಕಂಠ ॥ ೩ ॥ ಕಾಮಿನಿ ವರವಿತ್ತ ದೆಸೆಯಿಂದ ಶರಣ |
ಮನ ಚರಣ ಕಂಡವಗಾಯ್ತು ಮರಣ ॥ ಆ ಮೇಲೆ ನಮ್ಮರಸನ ಸ್ನೇಹ
ಳಸಿ | ಕಾಮಸನ್ನಿಭ ಇಂದ್ರಸುತನ ಸಂಹರಿಸಿ ॥ ೪ ॥ ಸೇನಾಧಿಪತ್ಯವ
ಗ್ರೀವಗಿತ್ತು | ಜಾನಕಿಯನರಸಲು ನೇಮವೆಮಗಿತ್ತು ॥ ನಾನಾ ರಾಜ್ಯದೊ
ಲ್ಲ ಹುಡುಕಿಪರಿಲ್ಲ | ಏನು ಮಾಡುವುದೆಂದೆಮಗೆ ಕಾಂಬುದಿಲ್ಲ ॥ ೫ ॥

ವಾರ್ಧಿಕ

ಪಿರಿರಾಮಚಾರಿತ್ರಮಂ ಕೇಳ್ದು ಹಿಂದೆ ರವಿ | ಕಿರಣಮುರಿಯಲಿ ಬೆಂದ
ರಿ ಮತ್ತೆ ಮೂಡಿದುವು | ಎರಡು ಪಕ್ಕದೊಳಿವರೆಲ್ಲರಂ ಕುಳ್ಳಿರಿಸಿ ಶರಧಿ
ಡಿಯೊಳಗಿಳುಹುತ ॥ ಬೆರಳ ಸನ್ನೆಯಲಿ ತೋರಿದನು ಲಂಕಾದ್ವೀಪ | ಪುರ
ವೇಯೆಂದು ತೆರಳಿದನು ಸಂಪಾತಿ ಭೋ | ಗರೆವ ಶರಧಿಯ ಕಂಡು ಕಪಿ
ನಾಯಕರಿಗೆ ವಾನರಶ್ರೇಷ್ಠನಿಂತೆಂದನು ॥ ೧ ॥

ರಾಗ ತುಜಾವಂತು ಏಕತಾಳ

ಕಂಡಿರೇ | ನೀವು | ಕಂಡಿರೇ ॥ ಪ ॥ ಕಂಡಿರೇ ಸಮುದ್ರರಾಜ | ಕೆಂಡ
ಂತುಜ್ವಲಿಸುತಿಹುದ ॥ ಕಂಡಿರೇ ॥ ೧ ॥ ಧರೆಯ ಪುಣ್ಯನದಿಗಳನ್ನು ಕರೆಸಿ
ರಸಿಕೊಂಡುಬ್ಬಿ ಕೊಬ್ಬಿ | ಮೆರೆವುದ | ಭೋ | ಗರೆವುದ ॥ ಕಂಡಿರೇ ॥
೨ ॥ ಅಂಬರಕ್ಕೆ ಹಾರಿ ಮಗುಚಿ | ಲಂಘಿಸುವುದಬ್ಬರ ಹೆಚ್ಚಿ | ನೊರೆಗಳ |
ಹ | ತೆರೆಗಳ ॥ ಕಂಡಿರೇ ॥ ೩ ॥ ಅಗಣಿತ ಪರ್ವತಂಗಳ | ಮಿಗೆ ಮತ್ಸ್ಯ
ಮಾನುಗಳು | ಹೊಳೆವುದ | ಬಾಯ | ತೆಳೆವುದ ॥ ಕಂಡಿರೇ ॥ ೪ ॥ ಹೇಗೆ
ದಾಟಬೇಕು ಎಂದು | ನಾಗಶಯನ ಬಲ್ಲನೊಂದು | ತಿಳಿಯದು | ಪ್ರಾಣ |
ಉಳಿಯದು ಕಂಡಿರೇ ॥ ೫ ॥

ರಾಗ ಭೈರವಿ ಝಂಪೆತಾಳ

ಇದಕೆ ಚಿಂತೆಗಳೇಕೆ ನಿಮಗೆ | ಸ್ವಾಮಿ | ಪದುಮನಾಭನ ಕರುಣವಿಲ್ಲವೇ ನಮಗೆ ॥ ಇದಕೆ ॥ ಪ ॥ ಹಾರುವೆನು ಶರಧಿಯೊಂದರೆ ನಿಮಿಷದೊಳಗೆ | ಎದೆ | ಹೋರುವೆನು ರಾವಣನ ಹತ್ತು ತಲೆಗಳ ದೆಸೆಗೆ ॥ ಬೀರುವೆನು ಶಾಕಿನೀ ಡಾಕಿನೀಗೌತಣವ | ತೋರುವೆನು ರಕುತದೋಕುಳಿಯ | ಹಿಂದೆ | ಜಾರುವೆನು ಕೈಮುಗಿದು ಕಂಡು ಜಾನಕಿಯ ॥ ಇದಕೆ ॥ ೧ ॥ ಜಾಂಬವರ ನುಡಿಕೇಳ್ದು ಬೆದರದುಬ್ಬೇರಿದನು | ಜಂಭಾರಿಸುತನ ಸುತ ನುಡಿದರಾ ಪಾಡೇನು ॥ ಕುಂಬಿನಿಯ ಕಿತ್ತು ಕಡೆಗಿರಿಸಹೇಳಿದರು | ರವಿ | ಬಿಂಬವನು ತುಡುಕ ಹೇಳಿದರು | ಸಮರ | ಡೊಂಬಿಯಲಿ ಕಾಲಭೈರವನ ನುಂಗುವೆವು ಇದಕೆ ॥ ೨ ॥ ಶಿವನ ಕೈಲಾಸದಿಂದೋಡಿಸಲ್ ಪೇಳ್ಕಮಲ| ಭವನ ಪಟ್ಟವ ಕಿತ್ತುಬದಲೊಬ್ಬಗಿರಿಸುವೆವು ॥ ಜವನವರ ಎಡಗೈಯ ಬಿಗಿದು ಕಟ್ಟಿಳಿಕಹೆವು | ದಿವಿಜಲೋಕವನೆಳೆದು ತಹೆವು | ಇನ್ನು | ಲವಣಾಂಬುಧಿಯನಿಲ್ಲಿ ಈಗ ದಾಟುವೆವು ॥ ಇದಕೆ ॥ ೩ ॥

ವಚನ

ಇಂತೆಂದು ಒಬ್ಬರೊಬ್ಬರು ಪ್ರಸಂಗಿಸಲಾಗಿ ಜಾಂಬವರು ತನ್ನೊಳಗೆ ಆಲೋಚನೆಯ ಮಾಡಿ ಹನುಮಂತನಂ ಕರೆದು ಏನೆಂದರು ಎಂದರೆ–

ರಾಗ ಮಧ್ಯಮಾವತಿ ಅಷ್ಟತಾಳ

ನೀನೇ ಕಲಿ ಹನುಮ | ನಮ್ಮವರೊಳು | ನೀನೇ ಕಲಿ ಹನುಮ ॥ ಪ ॥ ನೀನೇ ಕಲಿಯು ನಮ್ಮ | ವಾನರರೊಳಗೆಲ್ಲ ಸಾನಂದದಿಂದ ಸಾ | ಗರವ ಲಂಘಿಸುವುದಕ್ಕೆ ॥ ೧ ॥ ಬಣಗು ರಕ್ಕಸ ರಾ | ವಣನ ಪಟ್ಟಣವೆಲ್ಲ ಅಣು ರೂಪಿನಲಿ ಮನೆ | ಮನೆಯ ಹುಡುಕಲಿಕ್ಕೆ ॥ ನೀನೇ ॥ ೨ ॥ ಕೆಟ್ಟ ರಕ್ಕಸ ರಡ್ಡ | ಗಟ್ಟ ನಿಲ್ಲುವರನ್ನು | ಕುಟ್ಟಿ ಲಂಕಾಪುರ | ಸುಟ್ಟು ಬರುವುದಕ್ಕೆ ॥ ನೀನೆ ॥ ೩ ॥ ಕೊಂಕದೆ ಕೊನರದೆ | ಲಂಕೆಯೊಳ್ ಸಿಲುಕದೆ | ಪಂಕಜ ಮುಖಿ ಸೀತೆ | ಯಂ ಕಂಡು ಬರಲಿಕ್ಕೆ ॥ ನೀನೇ ॥ ೪ ॥

ವಾರ್ಧಿಕ

ಎಂದ ಜಾಂಬವರ ನುಡಿ ಕೇಳ್ದು ಜೊಬ್ಬಿರಿವುತಜ | ನಂದನಗೆ ಕೈಮುಗಿ ವೃಕ್ಷಾಕ್ಷಣವೆ ತಿರಳಿದ ಮ | ಹೇಂದ್ರ ಪರ್ವತವೇರಿ ನಾಲ್ದೆಸೆಯ ನೋಡಿದನು

ಸಿಂಧು ಭೋರ್ಗುಡಿಸುತಿಹುದ ॥ ಇಂದುಶೇಖರ ಕಮಲಬಂಧುವಿಂದ್ರಾದಿ
ಸುರ । ವೃಂದ ಶಾರದೆ ಗೌರಿ । ಗಣಪ ಮೊದಲಾಗಿ ರಘು । ನಂದನನ ಧ್ಯಾನಿ
ಸುತ ಪುಟನೆಗೆದು ಹಾರಿದಂ ಮೂರ್ಲೋಕ ತಲ್ಲಣಿಸಲು ॥ ೧ ॥ ಒದೆದು
ಗಗನಾಂಗಣಕೆ ಲಂಘಿಸಿದ ಭರಕಾಗ । ಹದಿನಾಲ್ಕು ಲೋಕವಲ್ಲಾಡಿಮುದು
ನೆಲವದುರಿ । ಉದಧಿ ಕಂಪಿಸಿತಷ್ಟಗಜ ಕೂರ್ಮ ಫಣಿರಾಜ ಮೊದಲಾದರೆದೆ
ಗೆಟ್ಟರು ॥ ಬೆದರಿದರು ಸುರರು ನಾಯಕದಿಂದ ನಿರ್ಮಿಸಿದ । ಸುದತಿ ಬಂದಡ್ಡ
ಗಟ್ಟಿಪಡವಳ ಸವೆಬಡಿವು । ಉದರದೊಳು ಪೊಕ್ಕು ಛಾಯೆಯ ಸೀಳಿ ಮುಂದಿ
ರುವ ಮೈನಾಕನಂ ಮನ್ನಿಸಿ ॥ ೨ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಹಾರಿದನು ಲಂಕೆಯನು ಬಿಟ್ಟೀ । ನೂರು ಯೋಜನ ಮುಂದೆ ನಡೆಯುತ । ಸಾರಿದನು ತೃಣಬಿಂದು ಮುನಿಪನ ಶಾಲೆಯೆಡೆಗೆ ॥ ೧ ॥ ಊರ ಹೊಲಬನು ತಿಳಿಯದಲ್ಲಿ ವಿ । ಚಾರಿಸಲು ಬೇಕೆನುತ ಮುನಿಯ ಪ । ದಾರವಿಂದಕೆ ಕೈಯ ಮುಗಿದನು । ವೀರ ಹನುಮ ॥ ೨ ॥ ಮಾತನಾಡಿಸಿಕೊಂಬೆನೆನುತಲಿ । ಮತ್ತೆ ಸ್ತುತಿಸುತ ಬಹಳ ದೈನ್ಯದಿ । ವಾತಸಂಭವ ನುಡಿದನಾ ಮುನಿ । ನಾಥಗೆಂದು ॥ ೩ ॥

ಯಾವ ದೇಶಂಗಳಿವು । ಯಾವ ರಾಜ್ಯಂಗಳಿವು । ನೀವಿಲ್ಲಿ ನೆಲೆಯಾಗಿ । ಇನ್ನೆಷ್ಟು ದಿವಸ ॥ ೧ ॥ ರಾವಣೇಶ್ವರನೆಂಬ । ರಕ್ಕಸನ ಪುರವೆಲ್ಲಿ । ಯಾವ ದಿಕ್ಕಿನೊಳುಂಟು । ಲಂಕಾಧಿನಗರ ॥ ೨ ॥ ಕಾರ್ಯವುಂಟೆಮಗಲ್ಲಿ ಕಳ ರಕ್ಕಸನಲ್ಲಿ । ಕೋರಿಕೆಗೊಟ್ಟರೆ ತಿಳಿಸು । ಬಹು ಪುಣ್ಯ ಬಹುದು ॥ ೩ ॥

ವಚನ

ಇಂತೆಂದು ಮುನಿಯ ಪಾದಕ್ಕೆರಗಿ ಬಹು ದೈನ್ಯದಿಂ ಬೇಳಿಕೊಂಬಂಥಾ ಹನುಮಂತನ ಭಕ್ತಿಯಂ ಕಂಡು, ಆತನು ಮಹಾಸ್ವಾಮಿಯ ಕಾರ್ಯಸಂಗ್ರಹಿ, ಪರೋಪಕಾರಿ, ಅತಿ ಧೈರ್ಯವಾನ, ಶರಣಾರ ಶ್ರೇಷ್ಠನೆಂದು ತಿಳಿದು, ಆತನಂ ಪರೀಕ್ಷಿಸಬೇಕೆಂದು ಕಣ್ದೆರೆದು ಕಟಾಕ್ಷದಿಂದ ನೋಡಿ ಹನುಮಂತನ ಕೂಡೆ ಆ ಮುನಿಶ್ರೇಷ್ಠನು ಏನೆಂದನು ಎಂದರೆ —

ರಾಗ ಸಾಂಗತ್ಯ ರೂಪಕತಾಳ

ಕುರುಡನ ಕೈಗೆ ಕನ್ನಡಿಯೇಕೆ ಬಧಿರಗೆ । ವರ ಸಂಗೀತಗಳ ಮಾತೇಕೆ ॥
ಎರಡು ಕಾಲಿಲ್ಲದ ಹೆಳವಗೆ ಯಾತ್ರೆಯ । ತಿರುಗಾಟದ ಸುದ್ದಿಯೇಕೆ ॥ ೧ ॥

ಮರ ಮರ ಚರಿಪ ವಾನರ ನಿನಗೀ ಲಂಕಾ | ಪುರದರಸನ ಸುದ್ದಿಯೇಕೆ ॥ ತಿರಿದುಂಬಾತನ ಮನ ಪಲ್ಲಕಿಯೇರುವ | ತೆರನಂತಾಯಿತು ನಿನ್ನ ಬದುಕು ॥ ॥ ೨ ॥ ಏಳು ಸುತ್ತಿನ ಕೋಟೆ ಕಣಿವೆ ಜರಿಗಳು ಸುತ್ತ | ಕಾಳ ರಕ್ಕಸರ ಕಾಲಾಟ ॥ ಮೇಲಾದ ಬ್ರಹ್ಮರಾಕ್ಷಸ ಭೂತಗಣಗಳ | ಜಾಲವು ನುಸಿ ಹೋಗಗೊಡವು ॥ ೩ ॥ ಮುನಿರಾಯ ಕೇಳಯ್ಯ ಹಿಂದುಮುಂದಾದರು | ತನುವಿದು ತನಗೆ ಶಾಶ್ವತವೆ ॥ ವನಜಸಂಭವ ಫಣೆಯೊಳು ಬರೆದಿಟ್ಟಂಥಾ | ದನು ಮೀರಲುಂಟೆ ಜೀವರಿಗೆ ॥ ೪ ॥ ಸ್ವಾಮಿಕಾರ್ಯದ ಮೇಲೆ ಸತ್ತರೆ ಎನಗೀಗ । ಕಾಮಿತಫಲ ಕೈಸೇರುವುದು ॥ ಆ ಮಾತು ನಿಮಗೇಕೆ ದಶಕಂಠನಿರುವಂಥ | ಸೀಮೆ ತೋರಿದರೊಂದೆ ಸಾಕು ॥ ೫ ॥

ರಾಗ ದೇಶಿ ಅಷ್ಟತಾಳ

ಕಪಿವರಾ ವೀರ ಕೇಳಿನ್ನ ಮಾತ | ಗುಪಿತದಿಂ ಬಹುಕಾಲವಾಯಿತು ॥ ತಪವ ಮಾಡುವೆವಿಲ್ಲಿ ನಾವ್ ॥ ೧ ॥ ತಲೆಯಿಂದಾ ಜಡೆಯಿಳಿದು ಪಾತಾಳಕೆ ಬಳಸಿಕೊಂಡತಿ ಬೇರುವರಿದವು | ಎಳೆಯಲಿಕೆ ಬಲ ಸಾಲದು ॥ ೨ ॥ ವೃದ್ಧರು ನಾವು ಏಳಲಾರೆವು ನಮ್ಮ | ಉದ್ದ ನೆಗಹಲು ರಾವಣೇಶ್ವರ । ನಿದ್ದಾವನು ತೋರ್ಪೆವು ॥ ೩ ॥ ಎಂದ ಮಾತಿಗೆ ಎರಡು ತೋಳ್ ಪಿಡಿದೆತ್ತಿ | ಅಂಬರಕೆ ನೆಗಹಲ್ಕೆ ಕಮಲಜ | ಶಂಭು ತಾ ಬೆರಗಾಗಲು ॥ ೪ ॥ ತೋರಲಾ ಮುನಿ ಲಂಕಾಪಟ್ಟಣವನು | ಹಾರಿದನು ಹನುಮಂತ ಲಂಕೆಯ | ನೇರಿದನು ಮಹದುರ್ಗವ ॥ ೫ ॥ ನಿಲ್ಲಲೋ ಕಪಿಯೆನುತ ಬಾಗಿಲ ಬಳಿ | ಯಲ್ಲಿ ತಡೆದಿಹ ಖುಲ್ಲ ರಕ್ಕಸ । ರೆಲ್ಲರನು ಸದೆಬಡಿದನು ॥ ೬ ॥ ಪೊಕ್ಕನಾ ಲಂಕಾಪಟ್ಟಣದೊಳಗೆಲ್ಲ । ರಕ್ಕಸರು ಗೊರಕಿಡುತ ನಿದ್ರೆಯ | ಕಕ್ಕಸವ ಭರ ವೀಕ್ಷಿಸಿ ॥ ೭ ॥ ಅಲ್ಲಲ್ಲಿ ರಾತ್ರಿ ತಿರುಗಾಡುವ ವೇಳ್ಯ | ದಲ್ಲಿ ಲಂಕಿಣಿಯೆಂಬ ದಾನವಿ । ಬಲ್ಲಿದಾತನ ತಡೆದಳು ॥ ೮ ॥

ರಾಗ ಶಂಕರಾಭರಣ ಏಕತಾಳ

ಮಧ್ಯರಾತ್ರಿಕಾಲದಲ್ಲಿ | ಮಾತನಾಡದೆ ಸುಮ್ಮನೆ | ಎದ್ದು ತಿರುಗಾಡುವಾತ | ನೀನಾರೋ ಕಪಿ ॥ ೧ ॥ ನಿದ್ರೆಯಿಲ್ಲವೇನೆ ನಿನಗೆ | ನೀನು ಭೂತಂಗಳ ಹಾಗೆ | ಉದ್ದುರುಟುತನವೇಕೆ | ಯಾರೆ ರಾಕ್ಷಸಿ ॥ ೨ ॥ ಭದ್ರವೆನ್ನ ಕಾವಲಿಲ್ಲಿ | ಲಂಕಿಣಿಯೆಂಬಾಕೆ ನಾನು | ಕ್ಷುದ್ರ ಕಳ್ಳ ಎನ್ನ ಕೈಗೆ | ಸಿಕ್ಕಿದೆಯಲ್ಲ ॥ ೩ ॥ ಕಳ್ಳನಲ್ಲ ಕಾಣೆ ನಾನು | ಬಾಣೆ ರಾಕ್ಷಸೀ ಕೇಳ್ ನೀನು । ಒಳ್ಳೆ ವಾಯುಪುತ್ರ ಹನುಮ | ನೆನ್ನ ಹೆಸರು ॥ ೪ ॥ ಹನು

ಮಂತನಾದರೇನು | ಕಣ್ಣು ಮೂರುಂಟೇನೊ ನಿನಗೆ । ಬಿಸುಗ ನಾ ಬಿಟ್ಟೇನೆ ನಿನ್ನ | ತಿನ್ನದನಕ ॥೫॥ ಎನ್ನ ಪಂಥ ನೋಡು ನಿನ್ನ | ಮಣ್ಣುಗೂಡಿಸುವೆ ಮುನ್ನ ಹೆಣ್ಣುಮೂಳಿ ದಾರಿಬಿಟ್ಟು ಅತ್ತತ್ತ ಸಾರೆ ॥ ೬ ॥ ವಾಯುಪುತ್ರ ನೀ ನೋಡೆನ್ನ | ಬಾಯೊಳಿದ್ದ ಪಲ್ಗಳನ್ನು | ನೋಯದೆ ನುಂಗುವೆ ನಿನ್ನ । ಮಾತು ಬೇರುಂಟೆ ॥ ೭ ॥ ನಾಯಿಗಳ ಹಾಗೊಂದೊಂದು | ಬಗುಳಿ ನೀನು ಪೆಟ್ಟು ತಿಂದು ಸಾಯಬೇಡ ಹೋಗತ್ತತ್ತ | ಕಳ್ಳೆರಕ್ಕಸಿ ॥ ೮ ॥ ಇಷ್ಟು ಪಂಥ ವಾದ ಮೇಲೆ | ಬಿಟ್ಟು ನಿನ್ನ ನಾ ಪೋದರೆ | ಕಷ್ಟವೆಂದು ಕೈಯೊಳೊಂದು| ಪೆಟ್ಟನಿಟ್ಟಳು ॥ ೯ ॥ ಭ್ರಷ್ಟ ಮೂಳಿಯೆಂದು ಹನುಮ | ಮುಷ್ಟಿಯಿಂದ ತಿವಿಯಲವಳು | ರಟ್ಟೆಮುರಿದು ಬಿದ್ದಳಾ ಕಾ | ರ್ಬೆಟ್ಟದಂಪದಿ ॥ ೧೦ ॥

ವಾರ್ಧಿಕ

ಹಲವು ಪರಿಯಲಿ ಕಾದಿ ದಣಿದು ಲಂಕಾಲಕ್ಷ್ಮಿ | ತೊಲಗಿದಳು ರಾವಣಗೆ ಬಂತು ದುರ್ದಶೆಯೆನುತ । ಬಳಿಕ ಹನುಮಂತನಣುರೂಪಿನಿಂ ಬಂದಲ್ಲಿ ಸುಳಿದಾಡಿ ಹುಡುಕುತಿರಲು ॥ ಬಲವಂತ ನಿದ್ರೆಯಲಿ ನೈಮರೆದು । ಮಲಗಿರ್ಪ ಕುಂಭಕರ್ಣನ ಶ್ವಾಸದೊಳು ಸಿಕ್ಕಿ ಸುಳಿಸುಳಿದು ವಜ್ರಕಂಭಕೆ ಹಿಡಿದು ಅಲ್ಲಿಂದ ಪೊರವಂಟು ದಣಿವನಂದು ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆ

ತ್ರಿಣಯಸಖ ಮಧುಸೂದನಾಚ್ಯುತ । ವನಜಲೋಚನನೆಂಬ ಜಪಗಳ । ನೆನೆಪಶರಣರ ಶ್ರೀಪ್ರಸ್ಥನ ವಿಭೀ । ಷಣನ ಕಂಡ ॥ ೧ ॥ ಇಲ್ಲಿ ನೋಡಿದರೀತ ರಕ್ಕಸ । ನಲ್ಲ ಗುಣವಿದೆಯೆನುತ ತಿರುಗಿದ । ಅಲ್ಲಿ ಕಂಡನು ರಾವಣೇಶ್ವರ । ನಂತಃಪುರವ ॥ ೨ ॥ ವಲ್ಲಭೆಯನೊಡಗೂಡಿ ರಾವಣ । ಚೆಲ್ವ ಮಂಚದ ಮೇಲೆ ಮಲಗಿರೆ । ಬಲ್ಲಿದನು ತಾ ಕಂಡು ಮನದಲಿ । ಬಳಲುತೆಂದ ॥ ೩ ॥

ರಾಗ ಕಲ್ಯಾಣಿ ಝಂಪೆತಾಳ

ಬಲು ದೋಷಕೊಳಗಾದ । ಪಾಪಿ ದಶಕಂಠ ॥ ಮಲಗಿದಾಕೆಯು ಇವಳು । ವೈದೇಹಿ ತಾನೆ ॥ ೧ ॥ ಕಲೆಯಾಯ್ತು ರಾಘವಗೆ ಕಾಂತೆಯಿವಳಿಂದ ॥ ಗೆಲವಿಲ್ಲ ಮುಂದೆಮಗೆ । ದಣಿವುದಿದು ವ್ಯರ್ಥ ॥ ೨ ॥ ವರಪತಿವ್ರತೆಯೆಂಬ ಬಿರುದನುರಿ ತೊರೆದು ॥ ಮರುಳಾದಳೀತನಿಗೆ । ಮುಂದಗಜಗಮನೆ ॥ ॥ ೩ ॥ ದಾನವನ ಸಂಹರಿಸಿ । ದಾಟವರೆ ನಾ ಮುಂದೆ ॥ ಏನೆಂದು ಪೇಳುವನೊ । ಎನ್ನೊಡೆಯ ರಾಮ ॥ ೪ ॥

ದ್ವಿಪದಿ

ತರಹರಿಸಿ ಮನದೊಳಗೆ ತನ್ನೊಡನೆ ರಾಮ । ಕುಮಹುಗಳ ಪೇಳ್ವುದನು ಕಂಡು ನಿಸ್ಸೀಮ ॥ ೧ ॥ ಪದುಮ ರೇಖೆಗಳಿಲ್ಲ ಪಾದದಲಿ ಮುಂದೆ । ವಿಧವತ್ವ ತೋರುತಿದೆ ಹೆಡತಲೆಯ ಹಿಂದೆ ॥ ೨ ॥ ಮಚ್ಛಲಾಂಛನ ನೋಡೆ ಬಲತೊಡೆಯೊಳಿಲ್ಲ । ಅಚ್ಯುತನ ಸತಿಯಿವಳು ಸರ್ವಥಾ ಅಲ್ಲ ॥ ೩ ॥ ಇವಳು ಜಾನಕಿಯಲ್ಲವೆಂದು ನಿಶ್ಚಯಿಸಿ । ತವಕದಲಿ ಹೊರವಂಟ ಭೂಸುತೆಯನರಸಿ ॥ ೪ ॥ ನವರತ್ನ ಬೀದಿಗಳ ಕನಕನಿರ್ಮಿತದ । ಭವನಗಳನೊಳಪೊಕ್ಕು ನೋಡಿ ಸನ್ನುತದ ॥ ೫ ॥ ಮನೆಮನೆಯ ತಾ ತಿರುಗಿ ಮತ್ತಲ್ಲಿ ಬಂದು | ದನುಜನುಪ್ಪರಿಗೆಯನು ತಾನೇರಿ ನಿಂದು ॥ ೬ ॥ ಸುಳಿಸುಳಿದು ನೆರೆ ದಣಿದು ಪಟ್ಟಣವನೆಲ್ಲ ನಳಿನಲೋಚನೆ ಸೀತೆಯನು ಕಂಡುದಿಲ್ಲ ॥ ೭ ॥ ಅರಸಿಕೊಳಲಿವರೊಳಗೆ ಶ್ರೀರಾಮನೆಂದು | ಪುರವ ನೆರೆ ಕಿತ್ತಿರಿಸುವೆನು ಕಣ್ಣಮುಂದು ॥ ೮ ॥ ಹೀಗೆಂದು ಮನದೊಳಗೆ ಹನುಮ ನಿರ್ಧರಿಸಿ | ಆಗ ತ್ರಿಕೂಟಾಚಲಕೆ ಬಾಲವನು ಬಳಸೆ ॥ ೯ ॥ ಆ ಸಮಯದಲಿ ಗಗನವಾಕ್ಯವನು ಕೇಳ್ದು | ಬೀಸುತಿಹ ಮಾರುತನ ವಾಸನೆಯ ತಾಳ್ದು ॥ ೧೦ ॥ ವನವಿದೊಂದಿದೆಯೆಂದು ಪೇಳಿದಾ ನುಡಿಯ | ಅನುವರಿತು ನೋಡುವೆನು ಎನುತಲಾ ಕಡೆಯ ॥ ೧೧ ॥ ಹಾರಿದಬ್ಬರಕೆ ನೆಲ ನಡುಗಿತುರವಣೆಗೆ | ಜಾರಿದವು ಮಣಿಖಚಿತ ಕನಕದುಪ್ಪರಿಗೆ ॥ ೧೨ ॥ ಮೆಲ್ಲನುದ್ಯಾನಕ್ಕೆ ಮಗುಳೆ ನಡೆತಂದ | ಫುಲ್ಲನೇತ್ರೆಯ ಶೋಕವನದೊಳು ಕಂಡ ॥ ೧೩ ॥ ಶಿಂಶುಪಾಮರನಡಿಯ ಕುಳಿತು ರಾಘವನ | ಚಿಂತಿಸುವ ಜಾನಕಿಯ ಕಂಡನಾ ಹನುಮ ॥ ೧೪ ॥

ರಾಗ ಸಾಂಗತ್ಯ ರೂಪಕತಾಳ

ಜಯ ಜಯ ತ್ರೈಲೋಕ್ಯಮಾತೆ ವಿಖ್ಯಾತೆ | ಜಯ ಜಯ ಸೀತೆ ಭೂಜಾತೆ ॥ ಜಯ ಜಯ ಶಕ್ತಿಸ್ವರೂಪೆ ಕೀರ್ತಿಕಲಾಪೆ | ಜಯ ಜಯ ಪುಣ್ಯಶರಣ್ಯೆ ॥ ೧ ॥ ಇವಳೀಗ ರಾಮನ ಕಾಂತೆ ಸಮಗುಣವಂತೆ | ಇವಳು ಸಜ್ಜನಪಾಲೆ ಶೀಲೆ | ಇವಳು ಬ್ರಹ್ಮಾದಿ ಸುರೌಘವಂದಿತೆ ವನಿತೆ | ಇವಳು ರಾಮನ ಪ್ರೀತೆ ಸೀತೆ ॥ ೨ ॥ ಧರಣಿಜೆಯಲಿ ದೋಷ ಕಲ್ಪಿಸಿದೆನು ನಾ ದುರುಳ ರಾವಣನ ಕಂಡಲ್ಲಿ ॥ ಕರವೆಡದರಲಿ ಬಾಯ್ ಹೊಯ್ದು | ತಪ್ಪಾಯ್ತೆಂದು | ಶಿರವ ತೂಗುತ ರಾಮಾ ಎಂದ ॥ ೩ ॥

ವಚನ

ಇಂತು ಅಶೋಕವನದಲ್ಲಿ ಏಕೋಭಾವದಿಂ ಚಿಂತಿಸುತ್ತಾ ರಾಮಧ್ಯಾನ

ವಲ್ಲಿರುವಂಥಾ ಸೀತಾಂಗನೆಯನ್ನು ಕಂಡು ಹನುಮಂತನು ಅನೇಕ ಸ್ತೋತ್ರ ವನ್ನು ಮಾಡಿ ಆ ವೃಕ್ಷವನ್ನೇರಿ ಸುಮ್ಮನೆ ಕುಳಿತಿರಲು, ಅತ್ತಲಾ ರಾವಣನು ನಿದ್ರೆಯಂ ತಿಳಿದೆದ್ದು ಮಧ್ಯರಾತ್ರೆ ವೇಳೆಯಲ್ಲಿ ಕಾಮಾತುರನಾಗಿ ಸರ್ವಾ ಭರಣ ಭೂಷಿತನಾಗಿ ಬೊಂಬಾಳ ದೀವಿಗೆಯಿಂದ ಆ ವನಾಂತರಕ್ಕೆ ಬಂದು ತನ್ನನುಕೂಲಕ್ಕೆ ತಕ್ಕಂತೆ ವ್ಯವಹರಿಸುವಂಥಾ ರಾಕ್ಷಸ ಸ್ತ್ರೀಯರಂ ಕರೆದು ನಾನಾ ಪ್ರಯತ್ನದಿಂದ ಸೀತೆಯನ್ನೊಡಂಬಡಿಸಿರೆಂದು ಕಳುಹಲಾಗಿ ಅವರು ಬಂದು ಜಾನಕೀದೇವಿಯೊಡನೆ ಏನೆಂದರು ಎಂದರೆ—

ರಾಗ ತೋಡಿ ಏಕತಾಳ

ದಾನವೇಂದ್ರನ ಕೂಡಲಿ । ನ್ನೇನು ಸಂದೇಹ । ಜಾನಕಿ ಸುಮ್ಮನೆ ಆನು । ಮಾನವೇಕಮ್ಮ ಹೇಳು । ದಾನ ॥ ಪ ॥ ರಾಮನೆಂಬ ಧ್ಯಾನ ಬಿಟ್ಟು । ಬೇಗ ನಾನಾಭರಣವಿಟ್ಟು । ರಾವಣನೊಳು ಪ್ರೇಮವಿಟ್ಟು । ಕಣ್ಣಿಗೆ ಕಾಡಿಗೆ ಯನಿಟ್ಟು ॥ ದಾನ ॥ ೧ ॥ ಪಟ್ಟೆಯ ಸೀರೆಯನುಟ್ಟು । ಪಟ್ಟೆಯ ಕುಪ್ಪಸ ತೊಟ್ಟು । ಕಟ್ಟಿ ತುಂಬಿಗುರುಳ ಮೇ । ಲಿಟ್ಟು ನಾನಾ ಪುಷ್ಪಗಳ ॥ ದಾನ ॥ ೨ ॥ ಕನ್ನಡಿಯ ನೋಡಿಕೊಳ್ಳಿ । ಕಣ್ಣಿಗೆ ಕಪ್ಪಿಟ್ಟುಕೊಳ್ಳಿ । ಪನ್ನೀರುಕೋ ಗಂಧದ ಕಮ್ಮೆಣ್ಣೆಲೇಪನದಿಂದ ॥ ದಾನ ॥ ೩ ॥

ವಚನ

ಈ ರೀತಿಯಿಂದ ಸತಿಯರು ನಾನಾ ಪ್ರಯತ್ನದಿಂದ ಒಡಂಬಡಿಸಲಾಗಿ ಆ ಸೀತಾಂಗನೆಯು ಕಣ್ತೆರೆಯದೆ ಸುಮ್ಮನಿರೆ ಅವರು ನಾಚಿಕೊಂಡು ತಿರುಗಿ ಬಂದು ರಾವಣನಿಗೆ ಈ ವೃತ್ತಾಂತವನ್ನು ಪೇಳಲು ಆಕೆಯ ಸಮೀಪದಲ್ಲಿ ಕಾದಿರುವಂಥಾ ಪರಮೆ ತ್ರಿಜಟೆಯರನ್ನು ಕರೆದು ಆಕೆಯ ಅಂತರ್ಭಾವವೇ ನೆಂದು ಕೇಳಲಾಗಿ ಆಗಲಾ ತ್ರಿಜಟೆಯು ಏನೆಂದಳು ಎಂದರೆ—

ರಾಗ ಸೌರಾಷ್ಟ್ರ ತ್ರಿವುಡೆತಾಳ

ಧರಣಿಸುತೆಗಾ ರಾಮಚಂದ್ರನ । ಸ್ಮರಣೆಯೇ ಹೊರತಾಗಿ ಮನದಲಿ । ಬರಿದೆ ಮತ್ತೊಂದಿಲ್ಲ ಯೋಚನೆ । ಇರುಳು ಹಗಲು ॥ ೧ ॥ ಪರುವತವ ನೊಣ ನುಂಗಿತಾದರು ಇರುವೆ ಶರಧಿಯ ಕುಡಿದು ಹೋದರು । ಪರುವಥಾ ಜಾನಕಿಯನೊಲಿಸಲು ಸಾಧ್ಯವಲ್ಲ ॥ ೨ ॥ ಚಂದನವು ತಾನು ಉಷ್ಣವಾದರು । ಚಂದಿರನು ಬಿಸಿಲಾಗಿ ಕಾಯ್ದರು । ಎಂದಿಗಾದರು ನಿನಗವಳು ಮನ । ಹೊಂದಳಯ್ಯ ॥ ೩ ॥ ಕಾಗೆ ತಾ ಬಿಳುಪಾಗಿ ಹೋದರು । ನಾಗರನ

ಹಲ್ಲಮೃತವಾದರು | ಆ ಗರುವೆ ಮಾಯುಕದ ಸುಡಿಗೋಳಗಾಗಳಯ್ಯ ॥ ॥ ೪ ॥ ಕಲ್ಲೊಳಂಬುಜವರಳಿತಾದರು । ಮಲ್ಲಿಗೆಯು ದುರ್ಗಂಧವಾದರು | ಎಳ್ಳನಿತು ಬೇಡಾಸೆ ನಿನಗಹ | ಅಲ್ಲ ಸೀತೆ ॥ ೫ ॥ ಬೆಕ್ಕುಗಳಿಗೂ ಕೋಡು ಬಂದರು | ಸಕ್ಕರೆಯು ಕಹಿಯಾಗಿ ಪೋದರು | ಮಿಕ್ಕ ಮಾತುಗಳೇಕೆ ಜಾನಕಿ| ಸಿಕ್ಕಳಯ್ಯ ॥ ೬ ॥

ವಚನ

ಇಂತೆಂದು ತ್ರಿಜಟೆಯಾಡಿದ ಮಾತು ಕೇಳಿ ತಾನೇ ಆಕೆಯ ಸಮಿಾಪ ದಲ್ಲಿ ನಿಂತು ಮಾತನಾಡಿಸಿ ನೋಡುವೆನೆಂಬ ಆಸೆಯಿಂದ ಸರ್ವಾಭರಣಗಳ ಪೆಟ್ಟಿಗೆಯಂ ಮುಂದಿರಿಸಿ ಏನೆಂದನು ಎಂದರೆ–

ರಾಗ ಘಂಟಾರವ ಆದಿತಾಳ

ಮಾರನಾಸ್ತ್ರ ತಾಗಿ ಬಿಗು | ವೇರಿತಲ್ಲೆ ಬಾಲೆ ॥ ನಾರಿ ಎನ್ನ ಮೇಲೆ ದಯೆ| ತೋರೆ ನೀ ದಮ್ಮಯ್ಯ ॥ ೧ ॥ ಇಪ್ಪತ್ತು ತೋಳಿಂದ ತೆಗೆ | ದಪ್ಪಿಕೊಂಬು ದಕ್ಕೆ | ಅಲ್ಪ ಮನಸಲ್ಲ ಕೇಳು | ಕರ್ಪೂರಸುಗಂಧಿ ॥ ೨ ॥ ಚಪ್ಪರಮಂಚದ ಮೇಲೆ | ಚಂದದಿ ಉಯ್ಯಾಲಿ ॥ ದರ್ಪಕನಾಟದಿ ನಿನ್ನ | ದಣಿಸುವೆ ನಾ ಮುನ್ನ ॥ ೩ ॥ ದೇವತೆಗಳುಗಂಧರ್ವರು | ದೇವಸ್ತ್ರೀಯರೆಲ್ಲ ॥ ದೇವೇಂದ್ರ ಮುಂತಾಗಿ ಎನ್ನ ಸೇವೆ ಮಾಳ್ಪರಲ್ಲೆ ॥ ೪ ॥ ಸೃಷ್ಟಿಯೀರೇಳರೊಳ್ ನಾನು । ಶ್ರೇಷ್ಠ ಕಾಣೆ ಜಾಣೆ ॥ ಪಟ್ಟದ ರಾಣಿತ್ವವನ್ನು | ಕೊಟ್ಟು ಬಾಳ್ವೆನಿನ್ನು ॥ ೫ ॥

ರಾಗ ಸಾವೇರಿ ಆದಿತಾಳ

ಮಾತನಾಡಬಾರದೇನೆ | ಸುಜಾಣೆ | ಮಾತನಾಡಬಾರದೇನೆ ॥ ಪ ॥ ಮಾತನಾಡಬಾರದೇನೆ | ಸೀತಾದೇವಿಯೆನ್ನೊಡನೆ ॥ ಪ್ರೀತಿಯಿಂದ ಸೋತು ಬಂದ ನೀತನೆಂಬ ಕರುಣದಿಂದ ॥ ಮಾತ ॥ ಅ ॥ ಕಾಮಿನಿ ನಿನ್ನನು ಕಂಡು ಕಾಮನು ದಂಡೆತ್ತಿ ಬಂದು | ಸಾವಧಾನದಿ ಬಿಲ್ಗೊಂಡು ಪ್ರೇಮದಿ ತೆಬ್ಬು ಸದ್ದು ಮಾಡಿದ ॥ ಎನ್ನೆದೆಗಿಡುವ ಸಾಮರ್ಥ್ಯದಿ ಗುರಿಯ ನೋಡಿದ | ತೆಬ್ಬ ಝೇಂಕರಿಸಿ । ಆ ಮಹಾ ಪ್ರತಾಪವ ಪೂಡಿದ ॥ ಬಿಡಲೆನಗೆ ತಾಗಿ | ನಾ ಮೂರ್ಛಿತನಾಗಿ ಬಿದ್ದೆನಲ್ಲೆ | ವಿರಹವೆನಗಳಿಸಿ | ಕಾಮುಕನಾಗಿ ನಾ ಬಂದೆನಿಲ್ಲೆ | ಇದಕೌಷಧಿಯು | ಕೋಮಲಶರೀರೆ ನೀನೆ ಬಲ್ಲೆ ॥ ನಿನ್ನನು ಬಿಡಲೊಲ್ಲೆ | ಭೂಮಿಯೊಳಿಹ ಬೇಕಾಗಿಹ ವಸ್ತು | ಪ್ರೇಮದಿ ತರಿಸಿ ಕೊಡಿ ಸುವೆ । ಶ್ಯಾಮಾಂಬರವನುಡಿಸುವೆ | ಹೇಮಾಭರಣವ ತೊಡಿಸುವೆ ॥ ಅ ಮನವಿದ್ದಂ | ತಾ ಮನಸಾದರೆ | ಪ್ರೇಮದೊಳನುದಿನ | ಕ್ಷೇಮದೋಳಿರುವೆ |

ಮಾತ ‖ ೧ ‖ ಕಣ್ಗೆ ನಿದ್ರೆ ಬಾರದು ಬಾ | ಯ್ಗನ್ನವು ಸೇರದು ಕಾಂತೆ | ನಿನ್ನಯ ಹಂಬಲಿನಿಂದ | ಲೆನ್ನಯ ಜೀವವುಳಿಯದೊಮ್ಮೆಗೆ ‖ ಮಾತನಾಡಿ ಕೊಂಬ | ಕನ್ನೆ ನೀ | ಬೇಗೆದ್ದು ಬಾ ಸುಮ್ಮನೆ | ಸಕಲೈಶ್ವರ್ಯ | ವೆನ್ನಲ್ಲಿ ಕೈಸೇರಿತು ಘಮ್ಮನೆ ‖ ತನಗೆ ಕುಂಭ | ಕರ್ಣನೆಂಬ ಶೌರ್ಯವಂತನನುಜ | ಇಂದ್ರನ ಜಯಿಸಿ | ಬನ್ನ ಬಡಿಸಿದಂಥವನೆನ್ನ ತನುಜ | ರಾಮನೆಂಬಾತ | ಗಣ್ಯನಲ್ಲ ನೋಡಲೊಬ್ಬ ಮನುಜ | ಸುರ ನರ ಫಣಿ ದನುಜ ‖ ಕನ್ನೆಯರೆಲ್ಲರು ಕಾದಿಹರನುದಿನ | ನಿನ್ನಯ ಸೇವೆಯೊಳಿರುವರು | ಮನ್ನಿಸಿ ಕರೆದರೆ ಬರುವರು | ಕನ್ನಡಿ ಕಲಶವ ತರುವರು ‖ ಹೆಣ್ಣಿಗು ಹೊನ್ನಿಗು ಮಣ್ಣಿಗು ಬಯಸುವ | ರೆನ್ನಲ್ಲಿಹ ಸಂಪನ್ನರ ನೋಡೆ ‖ ಮಾತ ‖ ೨ ‖ ಹಗಲಿರುಳು ಕೈಯೊಳ್ ನಿನ್ನ | ಬಿಗಿಯಪ್ಪಿಕೊಂಬೆ ನಾ ಮುನ್ನ | ಬಗೆಬಗೆ ಕಾಮನ ಕಲೆಯ | ಸೊಗಸಾಗಿ ತೋರುತ್ತ ಮುದ್ದಾಡುವೆ ‖ ಕರ್ಪೂರವೀಳ್ಯ | ಜಗಿದು ಸವಿತಾಂಬೂಲವ ನೀಡುವೆ | ಹೆಚ್ಚಿನ ಮೋಹದ | ಬಗೆಯಿಂದಲಿ ಮುತ್ತನು ಬೇಡುವೆ ‖ ಕುಚಕೆ ನಾ ಚ | ಳ್ಳುಗುರನಿಟ್ಟು. ಒರೆಸಿ ಲಲ್ಲೆಗರೆವ | ಮಲ್ಲಿಗೆಯರ | ಳುಗಳ ತಲೆಗೆ ಮುಡಿಸಿ ಮೋಹವೆರೆವೆ |.ಎಂದೆಂದು ಬಿಡದೆ | ಮಿಗಿಲಾದೈಶ್ವರ್ಯದಿ ನೀ ಸತತ ಮೆರೆವೆ ‖ ಅರಿತವಳಿಂಗೇನೊರೆವೆ | ದುಗುಡದೊಳನುದಿನ ರಾಮನೆಂಬ ಹುಲು | ಹಗುರ ಮನುಜನನು ನೆನೆವುದು ‖ ಅಗಣಿತ ಭಾಗ್ಯವ ತೋರೆದು | ಮಿಗಿಲೇ ಯೋಚಿಸು ನಿನಗದು ‖ ನಗೆಮೊಗ ನೆಗಹುತ | ಲೊಗುಮಿಗೆ ಹರುಷದಿ | ನಗರಕೆ ಬಾರೆಲೆ | ಸುಗುಣಾನ್ವಿತೆಯೆ ‖ ಮಾತ ‖ ೩ ‖

ವಾರ್ಧಿಕ

ಕುಹಕನೆ ಕೇಳ್ ರಾವಣನ ಮಾತು ಜಾನಕಿಗೆ ಕ | ರ್ಕಶಮಾಗಿ ಕಿವಿಗೆ ನಾಂಟಿದುವು ಕಣ್ಣಲಿ ಕಿಡಿಯು ಮಸಗಿ ಕೈಯಲಿ ತೃಣವ ಮುರಿದಿಕ್ಕಿ ಬಣಗು ರಕ್ಕಸಗವನಿಸುತೆ ನುಡಿದಳು ‖ ಪಿಸುಣರೊಳು ಬಣಗು ರಣಹೇಡಿ ಚಂಡಾಲ ದು | ವ್ಯಸನಿ ದುರಹಂಕಾರಿ ದುರ್ಜನ ದುರಾಚಾರಿ | ಅಸುರರೊಳಗಧಮನೇ ನೀಚ ನಾಯಿ ಅತ್ತತ್ತ ನಡೆಯೆಂದಳು ‖ ೧ ‖

ರಾಗ ಸಾವೇರಿ ಏಕತಾಳ

ಪರಮೆ ನೀ ಸಾಕ್ಷಿಯಾಗಿರು ‖ ಈ ಮಾತಿಗೆಲ್ಲ ‖ ಪರಮೆ ನೀ ಸಾಕ್ಷಿಯಾಗಿರು ‖ ದುರುಳ ತಾನುತ್ತಮನಂತೆ | ಸುರರಿಗೆಲ್ಲ ಶ್ರೇಷ್ಠನಂತೆ ‖ ಧುರದೊಳಧಿಕ ಶೂರನಂತೆ | ನಿರತ ಸಿರಿವಂತನಂತೆ ‖ ಪರಮೆ ‖ ೧ ‖ ಬಲ್ಲಿದನಾದರೆ ಶಿವನ ಬಿಲ್ಲನ್ನೇಕೆತ್ತದೆ ಪೋದ | ಕಲ್ಲೆದೆಯಾದರೆ ತೊಟ್ಟ |

ಲಲ್ಲಿ ಕಟ್ಟಿಸಿಕೊಂಬನೆ ॥ ಸರಮೆ ॥ ೨ ॥ ಅಂದೇ ರಾಮಚಂದ್ರನ ಕಣ್ಣ ಮುಂದೆ ಶಾರದೇತಕೆನ್ನ । ಹಂದೆಯಂತೆ ಕದ್ದುಕೊಂಡು । ಬಂದುದೇತಕಮ್ಮ ಹೇಳು ॥ ಸರಮೆ ॥ ೩ ॥ ಘೋರ ಪಾಪಿ ದೈತ್ಯ ಪರರ । ನಾರಿಯೊಳಿಂತೆಂ ಮೇಲೆ । ನೂರು ಜನ್ಮದಲ್ಲಿ ನರಕ । ಸೇರದಿರನು ಸುಳ್ಳಲ್ಲಮ್ಮ ॥ ಸರಮೆ ॥ ೪ ॥ ಕಾಣಬಹುದಿನ್ನೀ ಖಳನ । ಗೋಣುಗಳನ್ನು ತರಿದು ಯಮನ ತಾಣಕಿಟ್ಟ ಮೇಲೆ ಎನ್ನ । ರಾಣಿಯ ಮಾಳ್ಪ ಶ್ರೀರಾಮ ॥ ಸರಮೆ ॥ ೫ ॥ ಕೆಟ್ಟ ಮೂಳನಿವನ ತಲೆಯ । ಕುಟ್ಟಿ ಕಾಲೊಳೊದ್ದು ಕಡೆಯೊ । ಳಿಟ್ಟ ಮೇಲೆ ಎನ್ನ ರಾಮ । ಪಟ್ಟದ ರಾಣಿಯ ಮಾಳ್ಪ ಸರಮೆ ॥ ೬ ॥

ವಾರ್ಧಿಕ

ಕರುಳು ಕತ್ತರಿಸಿದುವು ಸೀತಾವಚನದಲ್ಲಿ । ದುರುಳ ರಾವಣ ಕೋಪದಿಂ ಖಡ್ಗಮಂ ಕೊಂಡು । ತರಳೆಯನು ಕಡಿದು ಬಿಸುಡುವೆನೆಂದು ಬರುತಿರಲು ವರ ಪತಿವ್ರತೆಯಲ್ಲಿಗೆ ॥ ಅರಿತಳಿಂಗಿತವ ಮಂಡೋದರಿಯು ಬಂದವನ । ಕರವಿಡಿದೊಡಂಬಡಿಸಿ ಪತಿಯ ತನ್ನರಮನೆಗೆ । ಕರೆದೊಯ್ಯಲಿತ್ತ ಜಾನಕಿ ಕ್ಲೇಶದಿಂದಳುತ ಸರಮೆಯೊಡನಿಂತೆಂದಳು ॥ ೧ ॥

ರಾಗ. ಸಾಂಗತ್ಯ ರೂಪಕತಾಳ

ಕಂಡೆಯ ಸರಮೆ ದಾನವ ಬಂದು ದಿನ ದಿನ । ದಂಡಿಸುತಿರುವಂಥ ಬಗೆಯ । ಭಂಡ ರಕ್ಕಸನುಪಟಳದಿ ಬೇವುದಕ್ಕಿಂತ । ಕೆಂಡದಿ ಬೀಳ್ವುದೆ ಲೇಸು ॥ ೧ ॥ ಇಂದು ಬರುವ ನಾಳೆ ಬರುವನು ಶ್ರೀರಾಮ । ನೆಂದಾಸೆ ಮಾಡಿದ್ದೆ ನಾನು ॥ ಇಂದಿಗೆ ದಿನವೆಷ್ಟು ಸಂದರು ರಘುಕುಲ । ಚಂದ್ರನ ದರುಶನವಿಲ್ಲ ॥ ॥ ೨ ॥ ಪೂರ್ವಜನ್ಮದೊಳೇಸು ಪಾಪ ಮಾಡಿದೆ ನಾನು । ದುರ್ವ್ಯಾಘೆಯಲಿ ಸಿಕ್ಕಿ ದಣಿದೆ ॥ ಸರ್ವಥಾ ಇನ್ನಾಸೆ ತೀರಿತು ಎನಗೀಗ । ಉರ್ವಿಯೊಳ್ ಬಾಳಿರ್ದೆನೆಂತು ॥ ೩ ॥ ಎಲ್ಲಿಯಾ ರಾಮನಿನ್ನೆಲ್ಲಿ ಲಕ್ಷ್ಮಣದೇವ । ನೆಲ್ಲಿರ್ಪುದೀ ಲಂಕಾನಗರ ॥ ಅಲ್ಲಿಗೆ ಬಂದೆನ್ನನೊಯ್ವನೆಂಬುದು ಸ್ವಪ್ನ । ದಲ್ಲಿಯು ಬೇಡ ಸಾರಿದೆನು ॥ ೪ ॥ ಎಂತಿರ್ಪರವರು ಎಂಬೆಂಬ ವಾರ್ತೆಗಳನು । ಕಾಂತೆ ಪೇಳುವವರಿಲ್ಲದಾಯ್ತು । ಇಂಥ ನಿರ್ಬಂಧ ಯಾತನೆ ಯಾವ ಸತಿಗು ಜ । ನ್ಮಾಂತರಕು ಬೇಡ ಕೇಳಮ್ಮ ॥ ೫ ॥ ನಿನ್ನ ಮಾತಿನ ಮೇಲೆ ನೀರೆ ನಾ ಕಾದಿದ್ದೆ । ನಿನ್ನವರಡಿಯ ಮೈಸಿರಿಯ ॥ ಆನ್ಯಾಯವಿದು ಮುಂದೆ ಇನ್ನು । ಬಾಳಿರುವುದು । ಮನ್ನಿಸಿ ಕೊಡು ಘೋರ ವಿಷವ ॥ ೬ ॥ ಆರು ತಿಂಗಳ ದಿನದಾರಭ್ಯ ನೀನೆನ್ನ । ಸೇರಿ ದಣಿದಿರೆನಗಾಗಿ ॥ ಯಾರು ಹೇಳಿದರಿನ್ನು ಕೇಳೆ ಮಾತುಗಳನ್ನು ಸೇರಿತು

ಮರಣ ಬಂಪಡಸಿ ॥ ೭ ॥ ಆಸೆ ನಿರಾಸೆಯಾಯಿತು ಮುಂದೆ ಬಾಳ್ವಭಿ | ಲಾಷೆಯಿನ್ನಿಲ್ಲ ನೋಡಿವರೆ ॥ ಕೇಶವಾದರು ಕೊರಳಿಗೆ ಸುತ್ತಿ ಪ್ರಾಣವ | ಗಾಸಿ ಮಾಡುವೆನಮ್ಮ ತ್ರಿಜಟಿ ॥ ೮ ॥ ಪ್ರಾಣದಾಸೆಯ ಬಿಟ್ಟಳೆಂಬುದನರಿತು ಆ | ಕ್ಷೋಣಿನಂದನೆ ಕೈಯ ಪಿಡಿದು ॥ ಏಣಾಕ್ಷಿ ತ್ರಿಜಟಿ ಪೇಳಿದಳಂತರಂಗದಿ | ಕಾಣಿಸಿದಂದಿನ ಕನಸ ॥ ೯ ॥

ರಾಗ ವರಾಳಿ ಅಷ್ಟತಾಳ

ಕಂಡೆನೀರೀತಿ ನಿದ್ರೆ | ಯೊಳ್ ಕೇಳ್ ಕಮಲಾಕ್ಷಿ ॥ ಕಂಡೆ ॥ ಪ ॥ ಪುಂಡರೀಕ ನೇತ್ರನು ಮಾ | ರ್ತಾಂಡಜಾತ ಸುಗ್ರೀವನ | ಹಿಂಡು ಕಪಿಗಳ ಕೂಡಿ | ಕೊಂಡು ಬಂದನೆಂಬುದನ್ನು ಕಂಡೆ ॥ ೧ ॥ ಹತ್ತು ತಲೆಯಾತ ರಕ್ತ | ವಸ್ತ್ರವನ್ನುಟ್ಟುಕೊಳ್ಳುತ್ತ | ಕತ್ತೆಯನೇರಿ ದಕ್ಷಿಣ | ಯಾತ್ರೆಗಾಗಿ ಪೋಪುದನ್ನು ॥ ಕಂಡೆ ॥ ೨ ॥ ಅಂಗನೆ ಮಂಡೋದರಿ ಕ | ರ್ಣಂಗಳೋಲೆ ಮೂಗುತಿಯು | ಮಂಗಳಸೂತ್ರವ ಹರಿದು | ಕಂಗಳೊಳು ನೀರಿಳಿದುದ ॥ ಕಂಡೆ ॥ ೩ ॥ ಅಷ್ಟ ಭಾಗ್ಯವೆಲ್ಲ ಪೋಗಿ | ದುಷ್ಟರ ಸಂಹಾರವಾಗಿ | ನೆಟ್ಟನೇ ವಿಭೀಷಣನು ಪಟ್ಟವಾಳುವ ಸ್ವಪ್ನ ಕಂಡೆ ॥ ೪ ॥ ಪುಂಡರೀಕವದನೆ ನಿಮ್ಮ | ಗಂಡನಾದ ರಾಮಚಂದ್ರ | ಕೊಂಡುಪೋಗಿ ನಿನ್ನನು ಭೂ | ಮಂಡಲ ವಾಳುವ ಸ್ವಪ್ನ ॥ ಕಂಡೆ ॥ ೫ ॥

ವಚನ

ಈ ಪ್ರಕಾರದಿಂದ ತ್ರಿಜಟಿ ತನ್ನ ಸ್ವಪ್ನವೃತ್ತಾಂತವಂ ಪೇಳಿ ಸಂತವಿಟ್ಟು ನಿದ್ರಾಮುದ್ರೇಕ್ಷಣರಾಗಿ ಪ್ರೈಮರಿದು ಮಲಗಿರುವ ಸಮಯದೊಳ್—

ವಾರ್ಧಿಕ

ಮನಸಿನಲಿ ಕಡು ನೊಂದು ಚಿಂತಿಸುವ ಜಾನಕಿಗೆ | ಕನಸಿನೊಳವಂ ಪೇಳ್ದೊಡಂಬಡಿಸೆ ತ್ರಿಜಟೆ ಮರ | ಗೊನೆಯೊಳಣುರೂಪಿನಿಂದಿರುತಲದನೆಲ್ಲಮಂ ಕಾಣುತಿರ್ದಂ ಹನುಮನು ॥ ಇನಕುಲದ ಸೌಭಾಗ್ಯ ಚಿಂತಾಮಣಿಗೆ ತಕ್ಕ | ವನಿತೆಯಿಹುದೆಂದು ಕೊಂಡಾಡಿ ಜನಕಾತ್ಮಜೆಯ | ಮನದೊಳಗೆ ತಾನೆ ತನ್ನೊಳು ಮಾತನಾಡಿದನು ಜಾನಕಿಯು ಕೇಳುವಂತೆ ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ನಳಿನಲೋಚನೆ ಕೇಳು ರಾಮಚಂದ್ರನು ಎನ್ನ | ಕಳುಹಲಿಲ್ಲಿಗೆ ಬಂದೆನು | ಗೆಲವಿನಿಂದಿಹ ತಮ್ಮ ಲಕ್ಷ್ಮಣ ಸಹ ನಿಮ್ಮ | ಬಳಿ ಪೋಗಿ ಬಾರೆನುತ ॥ ೧ ॥

ಕುವಲಯಾಂಬಕ ರಾಮ ಸುಗ್ರೀವ ಸಹಿತ ಪ್ರ । ಸ್ರವಣ ಪರ್ವತದೊಳಿಹ ।
ಎವೆ ಮಾತ್ರದಲಿ ನಿಮ್ಮ ಸ್ಮರಣೆಯಲ್ಲದೆ ಬೇರೆ । ವಿವರ ಕಾಣಿಸದೆನಗೆ ॥ ೨ ॥

ಕಂದ

ಮರಗೊಂಬಿನೊಳಿಂತೆಂದಾ । ಸಿರಿ ವಾಕ್ಯಮಂ ಕೇಳ್ದು ಸೀತೆ ಮೊಗನೆ ಹುತ್ತಂ ॥ ದುರುಳರ ಮಾಯಕವೆಂದೆನುತಿರೆ । ಮರವಿಳಿದಾಗ ಹನುಮ ಕೈ ಮುಗಿದೆಂದಂ ॥ ೧ ॥

ರಾಗ ಸೌರಾಷ್ಟ್ರ ಅಷ್ಟತಾಳ

ಮಂಗಳಮಹಿಮ ರಾಮನ ಪಾದದೆಡೆಯಿಂದ । ಬಂದೆನಮ್ಮ ॥ ಕೋಮಲಾಂಗ ಲಕ್ಷ್ಮಣದೇವ ಕಳುಹಿದ ಬಗೆಯಿಂದ । ಬಂದೆನಮ್ಮ ॥ ೧ ॥ ವಾತಸಂಭವ ಎನ್ನ ಮಾತೆಯಂಜನ ದೇವಿ । ಬಂದೆನಮ್ಮ ॥ ಭಾನು । ಜಾತನೆನ್ನೊಡೆಯ ಸುಪ್ರೀತಿಯಿಂ ಕಳುಹಲು । ಬಂದೆನಮ್ಮ ॥ ೨ ॥ ಬಲು ಬಲು ದೇಶವ ಕಳೆದೆಲ್ಲ ಹುಡುಕುತ್ತ । ಬಂದೆನಮ್ಮ ॥ ಇನ್ನು । ಹಲವು ಮಾತೇಕೆ ಸಾಗರವ ಲಂಘಿಸುತಿತ್ತ ಬಂದೆನಮ್ಮ ॥ ೩ ॥

ಕಂದ

ಎಂದಾ ಹನುಮನ ಮಾತಿಗೆ । ಚಂದ್ರಾನನೆ ಕಪಟವೆಂದು ಸುಮ್ಮನೆ ಇರಲು ॥ ಹಿಂದಾಗಿದ್ದುದನರುಹಿದ । ಡಿಂದರಿವಳೊ ಎಂದ ಬಳಿಕಲವನಿಂತೆಂದು ॥ ೧ ॥

ರಾಗ ಶಂಕರಾಭರಣ ಏಕತಾಳ

ಚಿತ್ತವಿಸು ದೇವಿ ನಿಮ್ಮ । ವರ್ತಮಾನವೆಲ್ಲ ಪೇಳ್ವೆ । ಸತ್ಯಾಸತ್ಯವೆಂಬುದನ್ನು ನೀವೆ ಬಲ್ಲಿರಿ ॥ ಧಾತ್ರಿಯೊಳ್ ಸಾಕೇತಪುರದಿ । ಪೃಥ್ವಿಪಾಲ ದಶರಥಂಗೆ ಸುಸ್ತ್ರೀಯರು ಮೂರು ಮಂದಿ । ಪತ್ನಿಯರಂತೆ ॥ ೧ ॥ ಮತ್ತೆ ಕೌಸಲ್ಯೆ ಕೈಕೆ ಸು । ಮಿತ್ರೆಯೆಂಬ ಮೂವರಿಗೆ । ಉತ್ತಮರು ನಾಲ್ಕು ಮಂದಿ ಪುತ್ರರಹುದೆ । ಸತ್ವದಿಂದ ನಿಮ್ಮನ್ನು ಬಿಲ್ಲೆತ್ತಿ ಜ್ಯೇಷ್ಠನಾದ ರಾಮ । ನರ್ತಿಯಲ್ಲಿ ಮಿಥಿಲೆಯಿಂದ ತಂದುದಹುದೆ ॥ ೨ ॥ ಜನಕನ ಮಾತಿಗೋಸ್ಕರ । ದಿನಕರವಂಶಾಬ್ಧಿ ಚಂದ್ರ । ಘನತರವಾಗಿಷ್ಟು ಘೋರ ವನಕ್ಕೆ ಬರುವಾಗ । ಮನಕರಗಿ ನೀವು ಲಕ್ಷ್ಮ । ಮಣ ಸಹಿತ ಮೂವರು । ನೆಲಸಿದಂಥ ಪಂಚವಟಿ । ವನಸವಿಸಾಪದಿ ॥ ೩ ॥ ತರಿದು ಮಾಗ । ರಕ್ಕಸಿಯು । ಖರದೂಷಣಾದಿಗಳ ತಲೆಯ । ಹರಿಯೆ ಪೊನ್ಮೃಗವ ಕಂಡು । ಆಶ್ಚರ್ಯದಿಂದ ತರಬೇಕೆಂದು ನೀವು ಪೇಳೆ । ತೆರಳಿ ರಾಮನಾ

ರಾವಣ । ಭರದಿ ನಿಮ್ಮನ್ನೆತ್ತಿಕೊಂಡು । ಬರುವ ಮಾರ್ಗದಿ ॥ ೪ ॥ ಕರಗಿ ಸೊರಗಿ । ಭಯದಿ ನೀವು । ಮರುಗುವಂಥ ಧ್ವನಿಯ ಕೇಳಿ । ತ್ವರಿತದಿಂ ಬಂದಾ ಜಟಾಯು ಭರಿತ ಶೌರ್ಯದಿ ದುರುಳಗಡ್ಡಗಟ್ಟಲಾಯ್ತು । ಸ್ಥಿರವನಿತ್ತ ನೀಲಾಗಿಹ । ಪರಿಯ ನೋಡಿವೆ ಲಾಲಿಸಮ್ಮ । ಕರುಣವನಿಟ್ಟು ॥ ೫ ॥

ರಾಗ ಕೇದಾರಗೌಳ ಅಷ್ಟತಾಳ

ಕುಂಜರಗಮನೆ ಕೇಳಾ ಮೇಲೆ ಶ್ರೀರಾಮ । ಕಂಜದಳಾಯತಾಕ್ಷ । ಮಂಜುಳಕಾಯ ಲಕ್ಷ್ಮಣ ಸಹ ಖಗಕುಲ । ಸಂಜೀವನನು ಕಂಡರು ॥ ೧ ॥ ಅಂಜದೆ ನಿಮ್ಮ ರಾವಣ ಕೊಂಡು ಬಂದುದ । ರಂಜಿತದಿಂದ ಕೇಳಿ । ನಂಜಾಮೃತವೆನುತಲಾ ಮರುದಿನ । ಮುಂಜಾನೆ ನಡೆತಂದರು ॥ ೨ ॥ ಚಂದ್ರಗೆ ರಾಹು ಸೋಂಕಿದ ಹಾಗೆ ಶ್ರೀರಾಮ । ಚಂದ್ರ ಲಕ್ಷ್ಮಣರೀರ್ವರು ಒಂದೊಂದು ಕಡೆಯ ನಿಮ್ಮನರಸುತ್ತ ಭರದಿ ಕ । ಬಂಧನ ಪರಿಹರಿಸಿ ॥ ೩ ॥ ಬಂದಾಗ ಶಬರಿಗೆ ಮುನಿತ್ತು ಬಹು ಮುನಿ । ವೃಂದವ ಸಂತಯಿಸುತ ॥ ಇಂದ್ರನ ಮಗನಾದ ವಾಲಿಯ ಭಯದಿಂದ । ನೊಂದಿರೆ ಸುಗ್ರೀವನು । ॥ ೪ ॥ ಶರವೇಗಮೂರ್ತಿಗಳೀರ್ವರು ವರ ಪಂಪಾ । ಸರಸಿಯ ತಡಿಯೊಳಿರೆ । ತರಣಿನಂದನ ಕಂಡು ಕರೆಸಲವರು ಚುನ್ನ । ಗಿರಿಯ ಮೇಲಕೆ ಬಂದರು ॥ ೫ ॥ ತಾಳಿಯ ಮರವೇಳ ಮುರಿದು ದುಂದುಭಿಯಟ್ಟಿ । ಕಾಲಿನಿಂದೊದ್ದ ಮೇಲೆ । ವಾಲಿಯ ಕೊಂದು ಸುಗ್ರೀವಂಗೆ ಪಟ್ಟವ । ಪಾಲಿಸಿ ತನ್ನೊಳಗೆ ॥ ೬ ॥ ಕಾಲ ಮೇಳೆಯಲ್ಲಿ ನಿಮ್ಮ ನರಸಬೇಕೆನುತ ಭೂ । ಪಾಲನಪ್ಪಣೆಯ ಕೊಟ್ಟು । ಏಳು ಮತ್ತೆಪ್ಪತ್ತು ಕೋಟಿ ನಾಯಕರು ಈ । ರೇಳು ಲೋಕವ ತೊಳಲಿ । ೭ । ಲೋಲಲೋಚನೆ ಸ್ವಯಂಪ್ರಭೆಯ ಪಟ್ಟಣದಿಂದ । ಮೇಲೆ ಬಂದಲ್ಲಿ ಮತ್ತೆ । ಪೇಳೆ ಸಂಪಾತಿ ತೋರಿಸಿದ ಕಾರಣದಿಂದ । ವಾಲಿ ಇಲ್ಲಿಗೆ ಬಂದೆನು ॥ ೮ ॥ ಮೇಲಾದ ಕಪಿಗಳು ಶರಧಿಯ ತಡಿಯಲ್ಲಿ । ಬಾಳ ಚಿಂತಿಸುತಿಪ್ಪರು । ಜಾಲವಾತಲ್ಲ ಜಾನಕಿ ಕೇಳು ಎನುತಲಿ । ಕಾಲಡಿಯಲಿ ಬಿದ್ದನು ॥ ೯ ॥

ವಾರ್ಧಿಕ

ಕೇಳುತಾಕ್ಷಣ ಕಣ್ಣೊಳಶ್ರುಗಳು ಜಾರಿದುವು । ಹೂಳಿದಂತಪ್ಪ ಪಶೋಕ ಜಲಮಯ ಶರಧಿ । ಗಾಳಿಯೊಡ್ಡಿದ ದೀಪದಂತೆ ತಲ್ಲಣಿಸಿ ರೋಮಾಳಿ ನೆಟ್ಟಗೆ ನಿಮಿರಿತು । ಬೀಳುಗೊಂಡುದು ಮನದ ಸಂಶಯದೊಳರ್ಧ ಬಲ । ಗಾಲ

ತೊಡೆಯಲಿ ಮತ್ಸ್ಯವುಂಟಂತೆಯೆನೆ ನಾಲ್ಕು | ಪಾಲೊಳೊಂದುಳಿಯೆ ಚಂಚಲ
ಬಳಿಕ ಕುರುಹುಗಳ ನೀಲಕುಂತಳೆಗೆಂದನು ॥ ೧ ॥

ರಾಗ ಘೂರ್ಜರ ಅಷ್ಟತಾಳ

ಚಿತ್ರಕೂಟದಲ್ಲಿ ನೀವು ಜಲಕ್ರೀಡೆಯಾಡುವಾಗ | ಲೆತ್ತಿ ಮುಂಗೈಯಲಿ
ನಿಮ್ಮ ಬಿಸಾಡಲು ಅತ್ತದ್ದು ಸರಿಯೇನಮ್ಮ ॥ ೧ ॥ ಮತ್ತೊಂದು ಗುರುತು
ಕೇಳತ್ರಿಮುನಿವರ್ಯನಾ | ಪತ್ನಿಯಾದನಸೂಯಾದೇವಿ ಭೂಷಣವ ತಂ |
ದಿತ್ತದ್ದು ಸರಿಯೆ ಹಿಂದೆ ॥ ೨ ॥ ಇನ್ನೊಂದು ಕುರುಹ ಕೇಳು ದಂಡಕವೆನಿ
ಸುವಾ | ರಣ್ಯದೊಳಗಸ್ತ್ಯಮುನಿ ಚಾಪವ ಕೊಟ್ಟು ಮನ್ನಿಸಿದುದು ಸರಿಯೆ
॥ ೩ ॥ ಅಂಗನೆ ಕೇಳೀ ಮಾತೆಲ್ಲ ಸುಳ್ಳಾದರೆ । ಮಂಗಳ ಮಹಿಮ ರಾಮನ
ಕಿರುಬೆರಳಿಗಿಟ್ಟುಂಗುರವಹುದೆ ನೋಡು ॥ ೪ ॥

ಶಾರ್ದೂಲವಿಕ್ರೀಡಿತಂ

ಶ್ರೀರಾಮಾಕರಕಂಜದಂಗುಲಿಯೊಳಿಟ್ಟಾ ಮುದ್ರಿಯಂ ನೋಡುತಂ
ನಾರೀ ಜಾನಕಿ ತೋಷಿಸುತ್ತಲದನುಂ ಕಂಗಳ್ಗೆ ತಾನೊತ್ತುತಂ
ಹೇರಾಳಾಕೃತಿ ಶೋಕಬಿಂದು ಜಲಗಳ್ ಸರ್ವಾಂಗಮಂ ಲೇಪಿಸಲ್
ಕಾರುಣ್ಯಾಂಬುಧಿ ರಾಮ ರಾಮಯೆನುತಾಶಾಭಾವದಿಂ ಕಂಡಳು ॥ ೧ ॥

ರಾಗ ಸೌರಾಷ್ಟ್ರ ಆದಿತಾಳ

ಹರಿಣಾಂಕನಿಭಾನನ ಪೂರ್ಣ | ಪರಿಶೋಭಿಪ ಹರಿಪುಂಗವನ ॥ ಹರಿ
ವಂಶಜಾತ ವಿಖ್ಯಾತ । ಹರಿ ಮಂಜುಳಕಾಯ ಮಮ ಪ್ರಿಯ ॥ ೧ ॥
ಪರಮೇಶ್ವರ ಪಂಕಜ ಲೋಚನ | ಪರಮ ಪಾವನ ಪರಮಾನಂದ ॥ ಸುರ
ಸೇವ್ಯ ಭೂಸುರಜನಪಾಲ ಭಾ | ಸುರ ಶೋಭ ದನುಜ ಕುಲಹರಣ ॥ ೨ ॥
ರಘುಪುಂಗವ ರಾಜರಾಜೇಶ್ವರ | ಜಗದಾತ್ಮಕ ಜಗದಭಿರಾಮ | ಸುಗುಣಾ
ನ್ವಿತ ಸುರಮುನಿ ಸೇವಿತ | ಅಗಜಾಪತಿಪ್ರಿಯ ಸೌಂದರ್ಯ ॥ ೩ ॥

ಶಾರ್ದೂಲವಿಕ್ರೀಡಿತಂ

ಎಂದಾ ರಾಮನ ಮುದ್ರಿಯುಂಗುರವ ತನ್ನಂಗ್ಯೊಳಿಟ್ಟಾ ಜಾನಕೀ
ಸೌಂದರ್ಯಾತ್ಮನ ದಿವ್ಯಮೂರ್ತಿಯುದರೊಳ್ ಕಂಡಂತೆ ಕೊಂಡಾಡುತಂ |
ಕಂದರ್ಪಾನನ ಪಂಕಜಕ್ಕೆ ರವಿ ತಾ ಬಂದಂತೆ ಸಂತೋಷದಿಂ
ಮುಂದಾ ರಾಮನ ಕ್ಷೇಮವಾರ್ತೆಗಳನುಂ ಕೇಳುತ್ತ ನಿಂತಿರ್ದಳು ॥ ೧ ॥

ರಾಗ ಮಧ್ಯಮಾವತಿ ಅಷ್ಟತಾಳ

ಕ್ಷೇಮವೇನೈ ಹನುಮ | ಸಪ್ತ ಪಂಗಿ | ಕ್ಷೇಮವೇನೈ ಹನುಮ ॥ ಪ ॥

ರಾಮಲಕ್ಷ್ಮಣರು ರಾಜ್ಯದಲ್ಲಿ ಸುಸ್ಥಿರವಾಗಿ | ಕ್ಷೇಮವೇನೈ ॥ ಅ ॥ ಮದನ ನಂಗವ ಪೋಲ್ವ ರಾಮ | ಬಲು | ಚದುರ ಲಕ್ಷ್ಮಣನು ಸಿಸ್ಸೇಮ | ಮೊದಲಿ ನಂಗದ ಕಾಂತಿ ಕಳವಳಿಸದೆ ಮತ್ತೆ | ಎದೆಗುಂದಲಿಲ್ಲವಲ್ಲ | ತಮ್ಮೊಳು ನೊಂದ | ವನು ಕುಂದಲಿಲ್ಲವಲ್ಲ | ನೀ ಬರುವ ದಿ | ನದೊಳೆಂತಿದ್ದರೆಲ್ಲ ॥ ಕ್ಷೇಮವೇನೈ ॥ ೧ ॥ ದಶಕಂಠ ಕಳವಿನೊಳ್ ತಂದ | ಇ | ನ್ನು ಶಿರಲೇಸಧಿಕ ನಿರ್ಬಂಧ ॥ ಪಶುಪತಿಯೊಬ್ಬನೆ ಬಲ್ಲನಲ್ಲದೆ ಬೇರಿ | ನ್ನು ಸಿಸುವೆನಾರ್ಗೆ ನಾನು | ಇನ್ನೊಮ್ಮೆ ಜೀ | ವಿಸುವಂದ ಪೇಳು ನೀನು | ನೋಡಿದೆಯಾ ರಾ | ಕ್ಷಸ ಮೂಳ್ಪ ಬಗೆಗಳನು ॥ ಕ್ಷೇಮವೇನೈ ॥ ೨ ॥ ಭೂತಳದೊಳಗೆ ಎನ್ನಂಥ | ಕಡು ಪಾತಕರುಂಟೆ ಹನುಮಂತ ॥ ಮಾತಾಪಿತರು ಬಂಧು ಬಳಗವೆಲ್ಲವ ಬಿಟ್ಟು | ಈ ತೆರನಾದೆನಲ್ಲಾ | ರಾಕ್ಷಸರ | ವಿಘಾತವ ಕಂಡೆ ಯಲ್ಲ | ಎನ್ನಯ ಪ್ರಾಣ | ಸಾಧನನಗಲ್ದೆನಲ್ಲಾ ॥ ಕ್ಷೇಮವೇನೈ ॥ ೩ ॥ ಇನ್ನು ಜೀವಿಸಲಾರೆ ನಾನು | ಇದ | ನಿನ್ನು ಕಾಂತಗೆ ಪೇಳು ನೀನು ॥ ನಿನ್ನಾಣೆ ನಿಮಿಷ ಬಿಟ್ಟಿರಲಾರದಂಥವ | ನನ್ನ ಹಂಬಲ ತೊರೆದ | ಸ್ನೇಹದಿ ನಾವು | ಮನ್ನಿಸಿದ್ದುದ ಮರೆದ ಈ ಮಾತಿಗೆ | ನಿನ್ನೊಳೇನೆಂದೊರೆದ ॥ ಕ್ಷೇಮವೇನೈ ॥ ೪ ॥

ವಚನ

ಇಂತೆಂದು ಜಾನಕಿಯು ನುಡಿಯಲಾಗಿ ಹನುಮಂತನು ಏನೆಂದನು ಎಂದರೆ–

ರಾಗ ಸಾರಂಗ ಅಷ್ಟತಾಳ

ಮನಸನೇನೆಂಬೆನಮ್ಮ | ಯಾವಾಗಲು ನೆನೆಸುವ ಗುಣದಿ ನಿಮ್ಮ | ಕನಸು ಮನಸಿನಲ್ಲಿ ಹಗಲಿರುಳೆನ್ನದೆ | ಘನ ಚಿಂತೆಯಿಂದಿರ್ಪುದ ಪೇಳುವೆನದ ॥ ೧ ॥ ಅನ್ನಾಹಾರವನೊಲ್ಲನು | ಆರೊಡನೆಯೂ ಮನ್ನಿಸಿ ಮಾತನಾಡನು ॥ ಕಣ್ಣೆಗೆ ನಿದ್ರೆ ಬಾರದೆ ಕಂಡ ಕಡೆಯಲ್ಲಿ | ಬನ್ನಬಟ್ಟಡವಿಯೊಳ್ ಬಳಲಿರ್ಪು ದಲ್ಲದೆ ॥ ೨ ॥ ಅನುಜ ಲಕ್ಷ್ಮಣನು ತಾನು | ಏಕಾಂತದಿ | ಕನಲಿ ಕಂಗೆಡು ವುದನು | ಮನಕೆ ಮನವೆ ಸಾಕ್ಷಿಯಲ್ಲದೆ ಬೇರಿಲ್ಲ | ಘನಕೆಯ ನಿಮ್ಮ ಗುಣವ ವರ್ಣಿಸುವುದು ॥ ೩ ॥ ತರಣಿನಂದನನು ತಾನು | ಏಕಾಂತದಿ | ಕರೆದು ಈ ಗುರುತವನು ॥ ಒರೆದು ರಾಘವ ಕಯ್ಯೊಳಿಟ್ಟ ಮುದ್ರಿಕೆಯನ್ನು | ಬರುವ ದಿನದಿ ಸುದ್ದಿ ಇದುವೆ ಮತ್ತೇನಿಲ್ಲ ॥ ೪ ॥ ತಿಂಗಳ ದಿವಸದಲಿ

ಸುದ್ದಿಯ ತಹು | ದೆಂಬ ತಹಂಗಳಲಿ ॥ ಉಂಗುರವಿತ್ತೆನ್ನ ಕಳುಹಿದ ಮೇಲೆ ಕೇ | ಳಂಗನೆ ನಾವಿತ್ತ ಪರಿಗಳನು ॥ ೫ ॥

ರಾಗ ಭೈರವಿ ಝಂಪೆತಾಳ

ನಾಳೆ ಸಂಜೆಗೆ ಹೋಗಿ | ಹೇಳದಿದ್ದರೆ ಕಡೆಗೆ | ನಾಲಿಗೆಯ ಕೊಯ್ಯುವುದೆ | ನಮ್ಮೊಡೆಯನಾಜ್ಞೆ ॥ ೧ ॥ ಗುರುತವನು ಕೇಳಿದರೆ ಏನೆಂಬೆ ರಾಘವನಿ | ಗರಿತು ಎನ್ನೊಳು ಪೇಳಿ | ರಂತರಂಗವನು ॥ ೨ ॥

ಕಂದ

ಹನುಮನ ಕಯ್ಯೊಳು ಚೂಡಾ | ಮಣಿಯನು ಕಾಣೀವುತ್ತ್ಮತಿ ಭರವಸದಿಂದಂ ॥ ಮನಸಿನೊಳಿದ್ದುದನೆಲ್ಲವ ನೆನೆಸುತ ಪೇಳ್ದಳಂದು ಕಾಂತೆ ಮಾರುತಿಯೊಡನಂ ॥ ೧ ॥

ಏಸು ದಿನ ಬೇಕೆನ್ನ ಪ್ರಾ | ಣೇಶನ ಕಾಂಬುದಕಿನ್ನು ಬೇಸರಿಕೆಯೆಂಬುದೇನ ಹೇಳಲಿ | ಹೇಗೆ | ತಾಳಲಿ ॥ ೧ ॥ ಬೇಟೆಗಾರನೊಬ್ಬ ಬಲೆಯ | ಕೋಟಲೆಗೆ ಸಿಕ್ಕಿದ ಹುಲ್ಲೆಯಾಟ | ದಂತೆ ಕಣ್ಣು ಕಣ್ಣು | ಬಿಡುವೆನು | ಎಂತು ತಡೆವೆನು ॥ ೨ ॥ ಕಾಗೆಯ ಹಿಂಡಿನೊಳ್ ಸಿಕ್ಕಿ | ಕೋಗಿಲೆ ಬಾಯ್ ಬಿಡುವಂತೆ | ಈಗ ಪಾಪಿಬಾಧೆಯಿಂದ | ಸಿಲ್ಲೆನು | ತನುವ | ನೊಲ್ಲೆನು ॥ ೩ ॥ ಬೆಕ್ಕಿಗಂಜಿ ಪಂಜರದಿ | ಸಿಕ್ಕಿದರಗಿಣಿಯಂತೆ | ರಕ್ಕಸನಟ್ಟುಳಿಗಾಗಿ | ಬೆಂದೆನು | ಕಡು ನೊಂದೆನು ॥ ೪ ॥ ಗರುಡನ ಬಾಯೊಳು ಸಿಕ್ಕಿ | ಉರಗನು ಸಂತಾಪವುಕ್ಕಿ ಮರೆಯುವ ಹಾಗಾಯಿತೇನ | ಹೇಳುವೆ ಹೇಗೆ | ಬಾಳುವೆ ॥ ೫ ॥

ರಾಗ ಸೌರಾಷ್ಟ್ರ ತ್ರಿವುಡೆ

ದೇವಿ ಚಿಂತಿಸಬೇಡ ರಾಘವ | ದೇವನನು ಕರಕೊಂಡು ಬಂದೀ | ರಾವಣನ ಸಂಹರಿಸದಿರೆ ತವ | ಸೇವಿಯಲ್ಲ ॥ ೧ ॥ ಎಂಟು ದಿವಸದಿ ನೋಡಿದೀ ದಶ | ಕಂಠನಿಗೆ ಮುದ್ಗರೆಯುದಿರೆ ವೈ | ಕುಂಠವಲ್ಲಭ ರಾಮಚಂದ್ರನ | ಬಂಟನಲ್ಲ ॥ ೨ ॥ ಚಿಂತೆಯೇತಕೆ ನಿಮಗೆ ರಾಮಗೆ ಅಂತರಂಗೊಂದೆನಿಸದಿದ್ದರೆ | ಪಂಥವೇನಿದು ಮುಂದೆ ನಾ ಹನುಮಂತನಲ್ಲ ॥ ೫ ॥

ಕಂದ

ಸಂಘದಿ ಬರು ಧೈರ್ಯಗಳ | ನಂತರಿಸದೆ ಪೇಳಿ ದೇವಿಯಪ್ಪಣೆ

ಯೆನಲೂ ॥ ಚಿಂತೆಯು ತಾಳುತ್ತಾತಿ ಹಸು । ನುಂತನ ಬಿಡಲಾರದೊರೆಜ ಳಂಬುಜನಯನೆ ॥ ೧ ॥

ರಾಗ ಯರಕಲಕಾಂಭೋಜಿ ಅಷ್ಟತಾಳ

ದಿಟವೇನೊ ನೀನು ಕಡೆಗೆಂದ ಮಾತು । ಸಟೆಯಲ್ಲವಲ್ಲ ರಾಘವನಿಲ್ಲಿ ಬರುವುದು ॥ ದಿಟವೇನೊ ॥ ಪ ॥ ಹಂಬಲಿಸುತ ಹಗಲಿರುಳು ನಾ ಬಲು ಚಿಂತೆ ಯೆಂಬ ಕತ್ತಲೆಯೊಳಗಿರೆ ನಿನ್ನ ನುಡಿ ರವಿ । ಬಿಂಬ ಕಂಡಂತಾಯಿತು ॥ ದುಃಖ ಗಳ ಕ । ದಂಬವೆಲ್ಲವು ಹೋಯಿತು । ಸಾರವೆಂದು । ನಂಬಿಕೊಂಡಿರುವೆ ಹೀಗೆಂದು ಲೇಸಾಯಿತು ॥ ದಿಟವೇನೊ ॥ ೧ ॥ ನೆರೆಬೆಳಗಾದರೆ ಮಲಗಿರ್ದ ಖಳರು ನಿ । ನ್ನರಿತು ಕೊಂಡೊಯ್ದು ಸಾವಿರ ನಿರ್ಬಂಧವ ಮಾಡಿ । ಸೆರೆಮನೆ ಯೊಳಗಿಟ್ಟಾರು । ಅಲ್ಲದಡೆ ನಿ । ಷ್ಠುರದಿ ನಿಗಳವಿಕ್ಕಾರು । ಮತ್ತೆನ್ನನೀ । ಸರನೆ ತ್ರಿಜಟೆಯುರೆಚ್ಚರಿಸಿ ಪೇಳಿದರು ॥ ದಿಟವೇನೊ ॥ ೨ ॥

ಕಂದ

ತಪ್ಪದೆ ಬಹು ಧೈರ್ಯಂಗಳ । ನೊಪ್ಪದಿ ಪೇಳುತಿರೆ ದೇವಿಯುಪ್ಪಣೆ ಕೊಡಲುಂ ॥ ಥೊಪ್ಪನೆ ಪೊರಡುತ ರಾವಣ । ಗಿಪ್ಪ ಮನೋದ್ಯಾನವನವ ಕಂಡನು ಹನುಮಂ ॥ ೧ ॥

ದ್ವಿಪದಿ

ಅಹಹ ಈ ವನ ನೋಡದವ ಮನುಜನಲ್ಲ । ಬಹು ರಮ್ಯತರವಾದ ವನದ ಸಿರಿಯೆಲ್ಲ ॥ ೧ ॥ ತೋಟ ವನ ಕೆರೆ ಬಾವಿ ತೆಂಗು ದಾಳಿಂಬ । ನಿಸಾಟಿಸಿಪ ಮಾವು ಪನಸಗಳ ಸೌರಂಭ ॥ ೨ ॥ ಜಂಬು ನೇರಳೆ ಕದಳಿ ಕಡಲೆ ದ್ರಾಕ್ಷೆ ಗಳ । ನಿಂಬೆ ಕಿತ್ತಳೆ ಬೆಳಲೆ ಸಿಜಪ ಖರ್ಜೂರ ॥ ೩ ॥ ಜಾಜಿ ಮಲ್ಲಿಗೆ ಚಂಪ ಕಾದಿ ಪುಷ್ಪಗಳ । ರಾಜಿಸುವ ಪೂಗ ಪುನ್ನಾಗ ವೀಥಿಗಳ ॥ ೪ ॥ ಸಾರಿ ಚಾತಕಾಂಭೋಜ ಪೊಸತು ನೈದಿಲೆಯು । ಭೂರಿ ಸೌರಮ್ಯ । ಗಿಣಿ ಹಂಸ ಕೋಗಿ ಲೆಯು ॥ ೫ ॥ ಇಂದ್ರಪುರದೊಳಗೆಸೆವ ಹೋಲುವೆಯ ವನವ । ಚಂದದಿಂ ಸರಿ ಮಿಗಿಲು ಎಂಬ ಘನವನವ ॥ ೬ ॥

ರಾಗ ಕಾಂಭೋಜಿ ಅಷ್ಟತಾಳ

ಸಿಕ್ಕಿಸುದಿನಗೊಂದು ತೋಟ । ಕಳ್ಳ । ರಕ್ಕಸರಿಹುದೊಂದು ಕಾಟ ॥ ಮುಕ್ಕುವೆಸಿವರೊಳಗಿದ್ದ ಹಣ್ಗಳನೆಂದು ಮಿಕ್ಕುಮಿಾರುತ ಘೋರಿಡುತ ಕಿರಿ ।

ಕಿಕ್ಕಿರೀಕಿರಿಗುಟ್ಟುತ ॥ ೧ ॥ ಮರದಿಂದ ಮರಕೆ ಲಂಘಿಸಿದ । ಮಲ | ಗಿರುವ ರಕ್ಕಸರ ಭಂಗಿಸಿದ ॥ ಪರಿಪರಿ ವಿಧದ ಪಣ್ಣಳ ಕೊಯ್ದು ತಿಂದು ಆ । ಬರಿಯ ಗೊಂಚಲ ಮರದ ಕೊಂಬೆಯು । ಮುರಿಮುರಿದು ಬೀಸಾಡಿದ ॥ ೨ ॥ ಬಾಳೆಯು ಗಿಡವೆಲ್ಲ ಹರಿದ । ರಸ | ದಾಳಿ ಕಬ್ಬುಗಳ ಚಪ್ಪರಿದ ॥ ಹೇಳಿ ನಿಮ್ಮಪ್ಪ ರಾವಣನ ಕೂಡೆನುತಲಿ | ಧೂಳಿಪಟವನು ಗೆಯ್ದು ನಿಮಿಷದಿ | ಹಾಳು ಮಾಡಿದ ವನವನು ॥ ೩ ॥ ಹೂವಿನ ಸಸಿಯೆಲ್ಲ ಕಿತ್ತ | ಕೊಳನ ತಾವರೆಗಳ ಕಲಕುತ್ತ | ಕಾವಲು ಮಲಗಿದ ಜಂಬುಮಾಲಿಯ ಕೊಂದು | ಜೀವಮಾತ್ರದಿ ಕೆಲರ ಕಳುಹಿದ | ರಾವಣೇಶ್ವರನಲ್ಲಿಗೆ ॥ ೪ ॥ ಅಕ್ಷಕುಮಾರನ ಬಡಿದ | ಕಳ್ಳ । ರಾಕ್ಷಸರ್ಗಳ ಮುಂಡೆಯೊಡೆದ ॥ ಆ ಕ್ಷಣದೊಳು ಶಕ್ರಜಿತು ಬಹು ಬೆಳಕಿಂದ । ಲಕ್ಷಗಜ ತುರಗಗಳ ಸಹ ಬಂ । ದೀಕ್ಷಿಸಿದ ಹನುಮಂತನ ॥ ೫ ॥

ವಾರ್ಧಿಕ

ಕೊಲ್ಲು ಕಡಿ ತಿವಿ ಕಟ್ಟು ಇರಿ ಬಾಣ ಬಿಡು ಕಪಿಯ । ಹಲ್ಲು ಮುರಿ ಹಾಕು ಹೊಯ್ ಹೊಯ್ ಕರುಳನುಗಿ ಸೀಳಿದು । ಬಿಲ್ಲಿನಲಿ ಸೆಳೆ ಖಡ್ಗ ಕುಂತ ತೋಮರ ಪರಶು ಗದೆ ಕಣೆಯ ಕಂಪನಗಳು ॥ ಚೆಲ್ಲಬಡಿ ಕೆಡಹು ನೂಕೆನುತಲಾರ್ಭಟಿಸುತ । ಲಲ್ಲಿ ಬಿಟ್ಟಸ್ತ್ರಗಳು ಮುರಿದುದಲ್ಲದೆ ಹನುಮ । ಹುಲ್ಲುಕಡ್ಡಿಗೆ ಬಗೆಯದಿರಲಿಂದ್ರಜಿತು ಬಳಿಕ ಎಲ್ಲರೊಡನಿಂತೆಂದನು ॥ ೧ ॥

ರಾಗ ಆಹೇರಿ ಅಷ್ಟತಾಳ

ಸಾಕು ಬಿಡಿ ಬಿಡಿ ಸಾಯದೀ ಕಪಿ ಸುಮ್ಮ । ನೇಕೆ ದಣಿಮಕೊಂಬಿರಿ ॥ ॥ ಪ ॥ ಅಂಬುಕೊಳ್ಳದು ಬಾಣ ತಾಗದು ಬರಿಬಾಯ । ಡಂಭಕಕಿಮು ಬೆದರದು ಕಾಣಿರೊ ॥ ಕುಂಭಕರ್ಣನ ವಜ್ರರಥದ ಮೇಲಿದನಿಟ್ಟು । ಕುಂಭಿನೀಪತಿಯಲ್ಲಿಗೊಯ್ಯಿರೆಂದನು ॥ ೧ ॥ ಅಕ್ಕಲು ಕಪಿ ವೈಯನೊಳೆದ ಕಾರಣದಿಂದ ಹತ್ತು ಸಾವಿರ ರಾಕ್ಷಸರು ಸತ್ತರು ॥ ಒತ್ತಿ ಕುಂಭಸ್ಥಳ ಮುರಿದಾನೆ ಮಡಿದಂತೆ । ವಿಸ್ತಾರಗಳನಿಂದ್ರಜಿತು ನೋಡುತ ॥ ೨ ॥ ಪೆಟ್ಟಿಗಂಜುವು ದಲ್ಲಸಾಧ್ಯವೆತ್ತುವುದಕ್ಕೆ । ಬಿಟ್ಟವ ಹಾಗೆ ಬೆಳೆದುಕೊಂಡಿಪೆ ॥ ಕಟ್ಟಿಗೆಗಳನು ತಂದೊಡ್ಡಿ ಬೆಂಕಿಯನಿಟ್ಟು । ಸುಟ್ಟು ಬೂದಿಯ ಮಾಡಿರೆಂದನು ॥ ೩ ॥ ನಗರವ ದಹಿಸುವಡಿದುವೆ ಮದ್ದೆಂದು ಸಾ । ಲಿಗೆ ಬೆಚ್ಚಿ ಬೆವರುವಂದದಿ

ಕಾಣಿಸಿ ॥ ಆಗಣಿತ ರಾಕ್ಷಸರುಗಳೆಲ್ಲ ಖೋ ಎಂದು । ನಗುವಂತೆ ರಥದ ಮಧ್ಯದಿ ಬಿದ್ದನು.

ಭಾಮಿನಿ

ಕೆಲರು ಹಿಡಿದರು ಮಿಣಿಗಳಲಿ ಕೆಲ | ಕೆಲರು ಸರಪಣಿಗಳಲಿ ಕೆಲವರು| ಕೆಲರು ವಜ್ರದ ಬಂಡಿಗಳ ಗಾಲಿಯಲಿ ಕೀಲಿನಲಿ ॥ ಕೆಲರು ಅಚ್ಚಿನ ಕೊಂಬಿನಲಿ ಸಲೆ । ಕೆಲರು ರಥಗಳ ಬೊಂಬೆಯಲಿ ಸಹ | ಕೆಲರು ಸತ್ವದಿ ನೂಕಿದರು ಹೆಮ್ಮಾರು ಕೈಗಳಲಿ ॥ ೧ ॥

ರಾಗ ಶಂಕರಾಭರಣ ಅಷ್ಟತಾಳ

ಎಳೆದರು ರಥದಿ ವಾನರನ | ಬಲು | ಬಲವಂತ ವೃಕ್ಷಸಂಚರನ | ಛಲದಂಕನಿಭ ಶುಭಕರನ | ಮದ | ಖಳಕುಲತಿಮಿರಭಾಸ್ಕರನ | ದಾರಿ | ಯೊಳು ಪೋಗುವಂಥ ಹೆಮ್ಮಾರಿಯ ಕರೆತಂದೂ | ದೊಳಗೆ ಬಿಟ್ಟಂತೆ ವೆಗ್ಗಳ ಸರಾಕ್ರಮದಿಂದ ॥ ಎಳೆದರು ॥ ೧ ॥ ಇತ್ತಡಿಯಲಿ ಮದ್ದಾನೆಗಳ | ಬಲು | ಶಕ್ತಿಯಿಂದೆಳೆವ ಶ್ವಾನಗಳ | ಸುತ್ತಲು ಬಿಗಿದ ನೇಣುಗಳ | ಪಿಡಿ | ದೆತ್ತುತಲೊಯ್ವ ತ್ರಾಣಗಳ ॥ ಭೋರೆ | ನುತ್ತ ವಾದ್ಯಗಳ ಕೇಳುತ್ತಲಂಬರದೊಳು | ನಿತ್ತು ನೋಡುವ ಸುರವೊತ್ತ ಸಂಭ್ರಮದಿಂದ ॥ ಎಳೆದರು ॥ ೨ ॥ ಮೇರು ಪರ್ವತದ ಹಾಗಿರುವ | ಕಪಿ | ವೀರನ ಮೈಯ ಛೀಕರವ । ಬಾರಿಬಾರಿಗೆ ಧ್ವನಿಗರೆವ | ಹತ್ತು ನೂರು ಸಾವಿರ ಭೇರಿ ಮೊರೆವ ॥ ಮುಂದೆ ॥ ಕಾರಣವರಿದಂಥ ನಾರಿ ಪುರುಷರು ಆ | ಊರಿಂದೊಕ್ಕಲು ಸಹ ಸೇರಿ ಮುತ್ತೊಂದೂರ ॥ ಎಳೆದರು ॥ ೩ ॥ ಈ ವಿಭವದೊಳೆಳೆತಂದು । ಬಂದು | ರಾವಣನಿದಿರಲಿ ನಿಂದು | ದೇವೇಂದ್ರಜಿತು ತಂದೆಗಂದು | ನಿಮ್ಮ । ಸೇವೆಯಿದೀಗ ಸಂತೆಂದು | ಕಪಿ | ಭಾವವ ನೋಡಲು ಠೀವಿಯ ಕಪಿಯೆಂದು | ರಾವಣಾಕಡೆ ಮಂತ್ರಿ ಹನುಮನೊಳಿಂತೆಂದ ॥ ಎಳೆದರು ॥ ೪ ॥

ರಾಗ ಪಂತುವರಾಳಿ ಅಷ್ಟತಾಳ

ಯಾವ ದೇಶದಿಂದ ಬಂದೆ | ವೀರ ಕಪಿರಾಯ ॥ ಯಾವಲ್ಲಿಗೆ ಪಯಣವಯ್ಯ | ಜಾಣ ಕಪಿರಾಯ ॥ ಪ ॥ ಪೆತ್ತ ತಾಯಿ ತಂದೆ ಯಾರು | ಇತ್ತ ಬಂದುದೇಕೆ ನೀನು | ಕಿತ್ತು ವನವ ಕೆಡಿಸಿದಂಥ ಕಾರಣವೇನು ॥ ಹತ್ತು ಸಾವಿರ ರಾಕ್ಷಸರು | ಅಕ್ಷಕುಮಾರರೆಲ್ಲ | ಮೊತ್ತ ಸಹಿತ ಕೊಂದುದೇಕೆ |

ಉತ್ತರವೇನಯ್ಯ ॥ ೧ ॥ ಅರಮನೆ ಆಸ್ಥಾನವೆಂಬ । ಮರಿಯಾದೆಯುಸಂಯುದೆ ಈ । ಪರಿಯು ಗರ್ವದಿಂದ ಕುಳಿ । ತಿರುವುದೇಕೆ ॥ ದೊರೆಗಳಪ್ಪಣೆಯಿಂದ ನಾ । ಇರದೆ ಕೇಳುವುದೀ ಮಾತು । ಮರುಳುತನವ ಬಿಟ್ಟು ಎನ್ನೊ । ಳರುಹು ಕಾರ್ಯವ ॥ ೨ ॥

ರಾಗ ಮಧ್ಯಮಾವತಿ ಅಷ್ಟತಾಳ

ದಶಕಂಠನೆಂಬಾತನಾರೊ । ತೋರಬೇಕಯ್ಯ । ದಶಕಂಠನೆಂಬಾತನಾರೊ ॥ ॥ ಪ ॥ ಜಗದೊಳು ಜನಕನ ಮಗಳು ಸೀತೆಯು ದಶ । ಮೊಗದಾತ ಕದ್ದುಕೊಂಡು ಬಂದನಂತೆ ॥ ಜಗದೇಕವೀರ ರಾಘವ ನೋಡಿ ಬಾರೆಂದು । ಮಿಗೆ ಹರುಷದಿ ಕಳುಹೆ ಬಂದೆ ನಾನು ॥ ದಶಕಂಠ ॥ ೧ ॥ ಬೇಹಿನ ಚರರನ್ನು ಬೆದರಿಸಿ ಕೊಲ್ಲುವು । ದಾವ ರಾಜ್ಯದ ರಾಜನೀತಿಯಿದು ॥ ನಾವು ಮಾಡಿರುವ ತಪ್ಪೇನು ಕಟ್ಟುವುದಕ್ಕೆ । ನೋವು ವೆಗ್ಗಳ ಮಾತು ಬಾರದಯ್ಯ ॥ ದಶಕಂಠ ॥ ॥ ೨ ॥ ಬೇಡವೆಂದರೆ ಮಾತ ಕೇಳದೆಯೆನಗಿಂತ । ಕೇಡು ಮಾಡಿಮುದೆನ್ನ ಬಾಲವೈಸೆ ॥ ರೂಢಿಪಾಲಕನುದ್ಯಾನವನು ನಿರ್ಮೂಲನ । ಮಾಡಿ ರಾಕ್ಷಸರ ಕೊಂದ ಪಾಪಿಯಿದು ॥ ದಶಕಂಠ ॥ ೩ ॥

ವಾರ್ಧಿಕ

ಮಾತಿನಲಿ ಜಾಣಕಪಿ ನೋಡಿದರೆ ಬಲವಂತ । ನೀತ ನಿಶ್ಚಯ ಮಲ್ಲ ಬಾಲ ಗಡವಿದರ ಪ । ಶ್ಚಾತಿಶಯ ವಸ್ತ್ರದಲಿ ಸುತ್ತಿ ಸುಡಬೇಕೆಂದು ದಶಕಂಠ ಕೋಪದಿಂದ ॥ ದೂತರಿಗೆ ನೇಮಮಂ ಕೊಡಲೂರ ಮನೆಮನೆಯ । ಪೀತಾಂಬರಾದಿಗಳ ಸಹ ತಂದು ಸುತ್ತಿದರು । ಆತುರದೊಳೆಣ್ಣೆಯೊಳಗದ್ದಿ ಕಿಚ್ಚಿಸಗಿದೊಡೆ ಜ್ಯೋತಿರ್ಮಯೋಕ್ತಮಾಯ್ತು ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಬಾಲತುದಿಯಲಿ ಮೊಳೆತು ರಂಜಿಸಿ । ಮೇಲುವಾಯ್ತದು ಸಾಲ್ಯ ದೆಸೆಯಲಿ । ಕಾಲಭೈರವಮುಖದ ವಹ್ನಿ । ಜ್ವಾಲೆಯಂತೆ ॥ ೧ ॥ ಕೋವಿದರ ಮನೆ ಗೋಪುರಂಗಳ । ಚಾವಡಿಯು ಸೌಧಗಳ ಚೌಕಿಯು । ರಾವಣನ ಕೊನೆ ಮಾಸೆ ಸಹಿತಲೆ । ಹೋಮಿಸಿದನು ॥ ೨ ॥ ಹಾರಿದನು ಬಳಿಕುಪ್ಪರಿಗೆಗಳ । ಕೇರಿಕೇರಿಯ ಜನರ ಮನೆಗಳ । ತೋರಿದನು ಕೋಪಾಗ್ನಿಗಾತಣ । ವೀರ ಹನುಮ ॥ ೩ ॥ ಕರಗಿದವು ನವರತ್ನಖಚಿತದ । ನೆಂವಿ ಕನಕದ ಬೊಂಬೆ

ಸಹಿತಲಿ | ಪರಿಪರಿಯ ನೂತನದ ಪೀತಾಂ | ಬರಗಳೆಲ್ಲ ॥ ೪ ॥ ಓಡಿದರು ಕೆಲರಗ್ನಿಭಯದಲಿ | ಬೇಡಿದರು ಕೈಮುಗಿದು ಹನುಮನ | ಮಾಡಿದರು ಮಂದಿರವ ಕೆಲರಾ | ಕಾಡಿನೊಳಗೆ ॥ ೫ ॥ ಆ ಸುಲಂಕಾನಗರದೊಳಗೆ ವಿ | ಭೀಷಣನ ಮನೆ ಹೊರತು ಅಗ್ನಿಯು | ರಾಶಿಯಾದುದು ಪುರದ ರಚನೆಯು ವಿನಾಶಲಳಿದು ॥ ೬ ॥

ವಾರ್ಧಿಕ

ಕೆಡಿಸಿ ನಂದನವ ಲಂಕಾಪುರವ ಬಾಲದಿಂ | ಸುಡಿಸಿ ಚೂಡಾಮಣಿಯ ಸಹಿತ ಹಾರಿದ ತಿರುಗಿ | ಕಡಲೊಳದ್ದಿದ ಕಿಚ್ಚ | ನೊಂದಿಸುತ ಕಪಿಸೇನೆಯೆಡೆಗೆ ನಡೆತಂದ ಬಳಿಕ ॥ ನುಡಿದ ಲಂಕೆಯ ಪಾರುಪತ್ಯಮಂ ಎಲ್ಲವರು | ಕೆಡಿಸಿದರು ರಾವಣನ ಎಂದು ಜನ ಪೇಳೆ ಜಗ | ದೊಡೆಯ ರಘುಪತಿಗೆ ಕಾಣಿಸಿಕೊಂಡು ಹನುಮಂತ ಪೊಡಮಟ್ಟು ಬಿನ್ನವಿಸಿದ ॥ ೧ ॥

ರಾಗ ಮಧ್ಯಮಾವತಿ ಅಷ್ಟತಾಳ

ರಾಘವಸ್ವಾಮಿ ಮಾತ ಲಾಲಿಸೊ ಪ್ರೇಮಿ | ಈಗ ನಾವೆಲ್ಲ ಪೋಗಿ ದಣಿದಂಥ ಬಗೆಯ ॥ ರಾಘವ ॥ ಪ ॥ ದೇಶ ದೇಶವನೆಲ್ಲ ತೊಳಲಿ ಬಳಲಿ ಕೊಂ. | ಡಾ ಸ್ವಯಂಪ್ರಭೆಯ ಪಟ್ಟಣದಿ ಸಿಕ್ಕಿ ॥ ಬೇಸತ್ತು ಕಣ್ವ ಮುನೀಶನಾಶ್ರಮ ದಾಟಿ | ಆ ಶರಧಿಯ ತಡಿ ಯೋಚಿಸುತಿರಲು ॥ ರಾಘವ ॥ ೧ ॥ ಶರಣ ಸಂಪಾತಿ ಲಂಕಾಪುರವೀಗ ನೋಡೆಂದು | ಬೆರಳ ಸನ್ನೆಯಲಾತ ತೋರಿದನು | ಶರಧಿಯ ಹಾರಿ ಲಂಕಾಪುರದ ಪಟ್ಟಣ ಸೇರಿ | ಇರುಳು ಲಂಕಿಣಿಯ ಸಂಹರಿಸಿದ ಬಗೆಯ ॥ ರಾಘವ ॥ ೨ ॥ ಕುಂಭಕರ್ಣನ ಶ್ವಾಸದೊಳು ಸಿಕ್ಕಿಕೊಂಡೊಜ್ರ | ಕಂಭಕ್ಕೆ ಬಡೆದು ಪೇಚಾಡಿ ಮತ್ತೆ ॥ ಹಂಬಲಿಸುತಶೋಕವನದಿ ಚಿಂತಿಸುತಿಪ್ಪ | ಕುಂಬಿನಿತನುಜೆಯ ಕಂಡು ಕೈಮುಗಿದೆನು ॥ ರಾಘವ ॥ ೩ ॥ ಅರಿತು ನಿಮ್ಮಪ್ಪಣೆಯ ಗುರುತಿಲ್ಲವ ಪೇಳಿ | ಕರಕಮಲದಲಿ ಉಂಗುರವ ಕೊಟ್ಟೆ ॥ ಬರುವೆನೆಂಟು ದಿನಕ್ಕೆ ಕರಕೊಂಡು ನಿಮ್ಮನೆಂ ॥ ದುರುತರದೊಳಗೆ ಭಾಷೆಯ ಕೊಟ್ಟು ಬಂದೆ ನಾನು ॥ ರಾಘವ ॥ ೪ ॥ ಬಳಿಕುದ್ಯಾನದಿ ಫಲಾಹಾರ ಮಾಳ್ಪಾಗ | ಖಳರೆನ್ನ ಹೆಡಗೈಯ್ಯ ಬಿಗಿದರಯ್ಯ ಹಲವು ಶಸ್ತ್ರಾಸ್ತ್ರ ಬಿಟ್ಟು ಕನಲಿ ಬಾಲವ ಸುಟ್ಟು | ಉಳಿದು ಪ್ರಾಣ ಮಾತ್ರದಿ ಬಂದೆ ನಾನಿಲ್ಲಿ ॥ ರಾಘವ ॥ ೫ ॥

ಭಾಮಿನಿ

ಅಣಿಯರಿತು ಬಿನ್ನವಿಸಿ ಶೌರ್ಯಾ। ಗ್ರಣಿಯ ಪಾದಕೆ ನಮಿಸಿ ಚೂಡಾ। ಮಣಿಯ ಕೈಯಲಿ ಕೊಡಲು ಜಯ ಜಯವೆಂದಿತಮರಗಣ ॥ ತ್ರಿಣಯಸಖ ಬೆರಗಾಗೆ ಕಪಿಸಂ | ದಣಿಯ ಮಧ್ಯದೊಳೆಸೆವುತಿರೆ ದಿನ। ಮಣಿಯ ಸುತ ಮೊದಲಾಗಿ ಸ್ತುತಿಸಿದರಂದು ರಾಘವನ ॥ ೧ ॥

ರಾಗ ಆಹೇರಿ ಆದಿತಾಳ

ಜಯ ಜಯ ರಘುಕುಲನಂದನ। ಭಯನಿವಾರಣ ಸುರವಂದನ ॥ ಜಯ ॥ ॥ ಪ ॥ ಅಂಬುಜಲೋಚನ ಅಘಕುಲನಾಶನ । ಕಂಬುಕಂಧರ ಕಮನೀಯ ರೂಪ ॥ ತುಂಬುರುನಾರದಗಾನವಿನೋದ ತ್ರಿ । ಯಂಬಕಸಖ ಹರಿ ನಮೋ ನಮೋ ॥ ಜಯ ॥ ೧ ॥ ಭಾಸುರಭೂಷಣ ಬಹುಮುನಿ ಪೋಷಣ । ದೂಷಣ ಖಳಕುಲನಾಶನ ॥ ಈಶ ಪರಮಗರುಡಾಸನ ಸರ್ವಲೋ। ಕೇಶ ಜಾನಕಿಪತಿ ನಮೋ ನಮೋ ॥ ಜಯ ॥ ೨ ॥ ಭಕ್ತವತ್ಸಲ ಭವರೋಗವಿನಾಶನ । ಮುಕ್ತಿದಾಯಕ ಮಂಗಲಮಹಿಮ ॥ ಉತ್ತಮಪುರುಷ ಸಾಕೇತಪಟ್ಟಣವಾಸ ಪೃಥ್ವಿಪಾಲಕ ರಾಮ ನಮೋ ನಮೋ ॥ ಜಯ ॥ ೩ ॥

ವಾರ್ಧಿಕ

ಅರಸುಮಕ್ಕಳೆ ಕೇಳಿರೀಗ ಚೂಡಾಮಣಿಯ । ಮರುತಸುತ ರಾಮಚಂದ್ರನ ಕೈಗೆ ಕೊಟ್ಟಲ್ಲಿ । ಭರಿತವಾಯಿತು ಸಂಧಿಯೆಂದು ವಾಲ್ಮೀಕಿ ಮುನಿವರ ಪೇಳ್ದ ಪುಣ್ಯಕಥೆಯ ॥ ಅರಿತು ಹೇಳುವ ಕೇಳುವಂಥ ಪುಣ್ಯಾತ್ಮರಿಗೆ। ದುರಿತಗಳ ಪರಿಹರಿಸಿ ಸಂತೋಷದಲಿ ಕಣ್ವ। ಪುರದೊಡೆಯ ಶ್ರೀಕೃಷ್ಣ ಸಕಲ ಭಾಗ್ಯವನಿತ್ತು ಪೊರೆವನನುಗಾಲ ಬಿಡದೆ ॥ ೧ ॥

ಯಕ್ಷಗಾನ ಚೂಡಾಮಣಿ ಪ್ರಸಂಗ ಮುಗಿದುದು.

॥ ಶ್ರೀಕೃಷ್ಣಾರ್ಪಣಮಸ್ತು ॥

ಸುಲಭಾ ಮುದ್ರಣಾಲಯ, ಸೋಮೇಶ್ವರ ಉಚ್ಚಿಲ T. No, 275

ವಿದ್ಯಾಭಂಡಾರ	12	00
ಜ್ಯೋತಿಷ ಸರ್ವ ವಿಷಯಾಮೃತ	4	50
ಯಂತ್ರ ಚಿಂತಾಮಣಿ	3	50
ಪ್ರಪಂಚ ದರ್ಪಣ	6	50
ಬೃಹಜ್ಜಾತಕಾಖ್ಯ (ಹೋರಾ ಶಾಸ್ತ್ರ)	30	00
ಹಸ್ತ ಸಾಮುದ್ರಿಕ	3	50
ಇಂದ್ರಜಾಲ ಮಹೇಂದ್ರಜಾಲ	4	50
ವಾಣಿ ಕನ್ನಡ-ಇಂಗ್ಲಿಷ್ ಭೋಧಿನಿ	6	00
ಡಿ. ಕೆ. ಬಾರಾದ್ವಜ ಡಿಕ್ಷನರಿ (ದೊಡ್ಡದು)	12	50
ಕನ್ನಡ-ಇಂಗ್ಲಿಷ್ ಶಿಕ್ಷಕ	4	00
ಕನ್ನಡ-ಹಿಂದಿ ಶಿಕ್ಷಕ	4	00
ಬ್ರಹ್ಮಚರ್ಯವೇ ಜೀವನ (ವೀರ್ಯನಾಶವೇ ಮೃತ್ಯು)	7	00
ಯೋಗಾಸನ ಹಾಗೂ ಬ್ರಹ್ಮಚರ್ಯ	3	75
ಉದರದ ಆರೋಗ್ಯ (ಸ್ನಾಯುಬಲ ಸಂವರ್ಧನ)	3	00
ಯೋಗಾಸನಗಳು	5	00

ತುಳು, ಕನ್ನಡ ನಾಟಕಗಳು

ಚೇರ್‌ಮೇನ್ ಕಿಟ್ಟಣ್ಣೆ	2	00
ಕೆಸರ್	2	50
ಪಗೆತ ಪುಗೆ	2	50
ಎಂಕ್‌ಲಾ ಮದ್ಮೆ ಆವೋಡೇ	1	50
ಸೊರ್ಕುದ ಪೊಣ್ಣು	1	50
ಈ ಪ್ರೀತಿ ಬದ್ಕೊಡಾ?	1	50
ಬೆನ್ಪಿನ ಪೊಣ್ಣು	2	50
ಪೊಸ ಜೋಡಿ	1	50
ಗಾಳಿಗ್ ಶಿಕ್ಕಿನ ತುಡರ್	2	00
ಯೇರ್ ಮಲ್ತಿನ ತಪ್ಪು? (ತುಳು ನಾಟಕ)	1	50
ಜೀವನ ಜೊತೆಗಾತಿ (ಕನ್ನಡ)	1	50
ಪತಿ ತೋರಿದ ಪಥ ,,	2	50
ಸುಪುತ್ರ ,,	2	00
ಮಣ್ಣಿನ ಮಗಳು ಅಬ್ಬಕ್ಕ ,,	1	50

ವಿ. **ಸೂ:** ಪುಸ್ತಕಗಳನ್ನು ಇಚ್ಛಿಸುವವರು ಮುಂದಾಗಿ ತಿಳಿದು ಕೊಂಡು ವ್ಯವಹರಿಸಬೇಕಾಗಿ ವಿನಂತಿ.

ನಮ್ಮ ಶ್ರೀ ನಿತ್ಯಾನಂದ ಗ್ರಂಥಾಲಯದ ಪ್ರಕಾಶನಗಳು

ಪುರಂದರದಾಸರ ಕೀರ್ತನೆಗಳು (ದೊಡ್ಡದು)	1	80
ಸುಭಾಷಿತ ನೀತಿ ಶಾಸ್ತ್ರವು	1	50
ಸೋಮೇಶ್ವರ ಶತಕ	1	00
ಭಕ್ತ ಕನಕದಾಸರ ಕೀರ್ತನೆಗಳು	1	00
ಭಕ್ತ ಪುರಂದರದಾಸರ ಕೀರ್ತನೆಗಳು	1	00
ಭಜನೆ ರತ್ನಾಕರ	1	00
ಶೋಭಾನೆ ಹಾಡುಗಳು	0	80
ಲಕ್ಷ್ಮೀ ಶೋಭಾನೆ ಹಾಡು	0	30
ರಾಜರಾಜೇಶ್ವರಿ ಅಮ್ಮನವರ ತುಳು ಭಜನಾವಳಿ	0	80
ತುಳುವಾಲ ಬಲಿಯೇಂದ್ರ	0	40
ಶೋಭಾನೆ ರತ್ನಾವಳಿ	0	40
ದೇವೀ ಭಜನೆ	1	00
ಹರಿ ಭಜನೆ ಪುಸ್ತಕ	0	40
ಹರಿ ಭಕ್ತಿ ಸಾರ	0	40
ಉದಯರಾಗ	0	70
ಸ್ತೋತ್ರ ಮಂಜರಿ (ದೇವರ ಸ್ತೋತ್ರಗಳು)	0	60
ಯಕ್ಷಗಾನ, ಪಂಚವಟಿ ರಾಮಾಯಣ	1	20
,, ಚೂಡಾಮಣಿ ಪ್ರಸಂಗ	0	80
,, ಅಂಗದ ಸಂಧಾನ	0	80
,, ವಾಲಿ ಸುಗ್ರೀವರ ಕಾಳಗ	1	00
,, ರತಿ ಕಲ್ಯಾಣ	0	90
,, ಕೃಷ್ಣಾರ್ಜುನ ಕಾಳಗ	1	20
,, ಶಿವಪಂಚಾಕ್ಷರಿ ಮಹಿಮೆ (ಶ್ವೇತಕುಮಾರ ಚರಿತ್ರೆ)	0	90
,, ವಿದ್ಯುನ್ಮತಿ ಕಲ್ಯಾಣ	1	20
ಕುಕ್ಕುಟ ಪಂಚಾಂಗ	0	40
ಕನ್ನಡ–ಮಲಯಾಳ ಶಿಕ್ಷಕ	1	60
ದಿ. ಸೆಲ್ಫ್ ಇಂಗ್ಲಿಷ್ ಸ್ಟಡಿ	1	00
ಇಂಗ್ಲಿಷ್ ಕಲಿಯಿರಿ	1	50
ಹೊಸ ಕನ್ನಡ ಚಿತ್ರ ಗೀತೆಗಳು	1	00
ನ್ಯೂ ಫಿಲಂ ಸಾಂಗ್ಸ್	1	80
ಹೊಸ ಹಿಂದಿ ಚಿತ್ರ ಗೀತೆಗಳು	1	00
ಹೊಸ ತುಳು ಚಿತ್ರ ಗೀತೆಗಳು	0	80
ಸಿನಿಮಾ ಪದ ಥಾಟಿದ ತುಳುಪದತ ಮಾಲೆ	1	00

ಪ್ರಕಾಶಕರು: ಯಂ. ವೆಂಕಟರಾವ್

ಶ್ರೀ ನಿತ್ಯಾನಂದ ಗ್ರಂಥಾಲಯ, ಮಂಗಳೂರು – 575001.

ರಕ್ಷಾಪುಟದ ಮುದ್ರಕರು — ಶಾರದಾ ಪ್ರೆಸ್, ಮಂಗಳೂರು - 575001.